# ಮಹಿಳಾ ವಿಶೇಷ

## MAHILA VISHESHA

ಕನ್ನಡ ತಿಂಗಳ ಪತ್ರಿಕೆ ಆಗಸ್ಟ್ 1-31 2017
KANNADA MONTHLY AUGUST 1-31 2017
ಸಂಪುಟ 2, ಸಂಚಿಕೆ 12 ಪುಟ : 24, ಬೆಲೆ : ರೂ. 5–00
Vol. 2, Issue 12, Pages: 24, Price : Rs. 5-00
ಸಂಪಾದಕರು: ಹೆಚ್.ವಿ. ವೆಂಕಟಸುಬ್ಬರಾವ್ ಮೊಬೈಲ್ 88803–34444



## ಒಳಪುಟಗಳಲ್ಲಿ...

ಸಂಪ್ರದಾಯ-ಆಚಾರ-ವಿಚಾರ Pg. No. 5
ಸೀರೆ ಉಡುವ ಮುನ್ನ ಗಮನಿಸಿ Pg. No. 6
ಬಾವುಟ ನುಣಿಚಿಕೊಂಡು ಹಾರುವುದೇಕೆ? Pg. No. 9
ಗಮಕ ಕಲೆ Pg. No. 10
ಮರದ ಪೊಟರೆಯೊಳಗೆ ನವರತ್ನ ಕಾಂತಿ Pg. No. 18

ನಾಡಿನ ಜನತೆಗೆ ವರಮಹಾಲಕ್ಷ್ಮಿ ಹಬ್ಬ, ರಕ್ಷಾಬಂಧನ, ಎಡಚರ ದಿನಾಚರಣೆ, ಸ್ವಾತಂತ್ರ್ಯ ದಿನಾಚರಣೆ, ಶ್ರೀ ಗೌರಿ-ಗಣೇಶ ಹಬ್ಬದ ಪ್ರಯುಕ್ತ ಶುಭಾಶಯಗಳು



## ಮರುಗ



ಗಣೇಶ ಚತುರ್ಥಿಯ ಶುಭಾಶಯಗಳು. ಗಣೇಶನ ಪೂಜೆಯನ್ನು ಮಾಡುವಾಗ ಅರ್ಚನೆಯಲ್ಲಿ 21 ಬಗೆಯ ಪತ್ರೆ ಅಥವಾ ಎಲೆಗಳ ವಿಧ್ಯುಕ್ತ ಪಾತ್ರವಿದೆ. ಇವು ಔಷಧೀಯ ಗುಣಗಳಿಂದಲೂ ಕೂಡಿದ್ದು, ಆಯುರ್ವೇದದಂಥ ಪ್ರಾಚೀನ ವೈದ್ಯಪದ್ಧತಿಯಲ್ಲಿ ಇಂದಿಗೂ ಪರಿಣಾಮಕಾರಿಯಾಗಿ ಬಳಕೆಯಾಗುತ್ತಿವೆ. ವೇದ-ಪುರಾಣ-ಜಾನಪದ ಕಥನ ರಾಶಿಯಲ್ಲಿ ಇವುಗಳ ಉಲ್ಲೇಖಗಳು ಹೇರಳವಾಗಿವೆ. ಒಂದೊಂದೇ ಪತ್ರೆಗಳ ಮಾಹಿತಿಯನ್ನು ನೀಡುವುದೇ ನಮ್ಮ ಉದ್ದೇಶವಾಗಿದೆ.

ಸಂಸ್ಕೃತ : ಮರುಬಕ, ಮರುವಾ, ಮಾರುತ, ಪ್ರಸ್ಯಪುಷ್ಪ
ಇಂಗ್ಲೀಷ್ : Origanum Majorana

ಮರುಗ ಸಾಮಾನ್ಯವಾಗಿ ಎಲ್ಲೆಡೆಯೂ ಬೆಳೆಯುವ ಚಿಕ್ಕ ಗಿಡವಾಗಿದ್ದು, ಗಿಡದ ಎಲ್ಲ ಭಾಗಗಳೂ ಸುಗಂಧಿತವಾಗಿರುತ್ತವೆ. ಇರದ ಹೂಗಳು ತುಳಸಿಯ ಹೂಗಳನ್ನು ಹೋಲುತ್ತವೆ. ಇದನ್ನು ಸಾಮಾನ್ಯವಾಗಿ ಉದ್ಯಾನವನಗಳಲ್ಲಿ, ಗಿರಿಗಳಲ್ಲಿ ಬೆಳೆಯಲಾಗುತ್ತದೆ. ಸುಗಂಧಕ್ಕೆ ಹೆಸರುವಾಸಿಯಾಗಿರುವ ಇದನ್ನು ಇತರ ಹೂಗಳ ಮಧ್ಯೆ ಇರಿಸಿ, ಮಾಲೆ ಕಟ್ಟುವುದು ವಾಡಿಕೆ.

ತಾಜಾ ಇಲ್ಲವೇ ಒಣಗಿದ ಮರುಗದ ಎಲೆಗಳನ್ನು ಸಲಾಡ್‌ಗಳೊಂದಿಗೆ ಮಿಶ್ರ ಮಾಡಿ ಸೇವಿಸುತ್ತಾರೆ. ವಿನೆಗರ್‌ಗೆ ಸುಗಂಧ ಬರಲು ಇದನ್ನು ಬಳಸುತ್ತಾರೆ. ಇದನ್ನು ಸುಗಂಧ ದ್ರವ್ಯಗಳು,ಸ ಆಬೂನು ಮತ್ತು ಲಿಕ್ಕರ್ ತಯಾರಿಕೆಯಲ್ಲಿ ಬಳಸುತ್ತಾರೆ. ಪಂಜಾಬ್‌ನಲ್ಲಿ ಮರುಗವನ್ನು ಕುಂಡಗಳಲ್ಲಿ ಬೆಳೆಸುತ್ತಾರೆ. ಮಾತ್ರವಲ್ಲ, ಆಹಾರದಲ್ಲಿ ಪುದೀನಾದಂತೆ ಬಳಸುತ್ತಾರೆ.

### ಔಷಧೀಯ ಗುಣಗಳು

★ ಸಂಧಿವಾತ, ಬೆನ್ನುನೋವು, ಹಲ್ಲುನೋವಿದ್ದರೆ ಮರುಗದಿಂದ ತಯಾರಿಸಿದ ತೈಲವನ್ನು ಲೇಪಿಸಿಕೊಳ್ಳುವುದರಿಂದ ಮತ್ತು ಇದರ ಎಲೆಗಳಿಂದ ಶಾಖ ಕೊಡುವುದರಿಂದ ನೋವು ಕಡಿಮೆಯಾಗುತ್ತದೆ.

★ ಮರುಗವು ಕ್ರಿಮಿಹರವಾಗಿದೆ. ಕಫವನ್ನು ಕರಗಿಸುತ್ತದೆ. ಆಸ್ತಮಾ, ಹಿಸ್ಟೀರಿಯಾ ಮತ್ತು ಪೆರಾಲಿಸಿಸ್‌ಗಳಲ್ಲಿಯೂ ಇದು ಉಪಯುಕ್ತ.

★ ಮುಟ್ಟಿನ ಸಂದರ್ಭದ ಹೊಟ್ಟೆನೋವಿನ ಉಪಶಮನಕ್ಕೂ ಇದು ನೆರವಾಗುತ್ತದೆ.

## ನನ್ನ ಮಾತು

### ಸಾಮಾನ್ಯ ಜ್ಞಾನ



ಮಾಧ್ಯಮಗಳು ಹೆಚ್ಚಿದಷ್ಟು ನಮ್ಮ ವಿದ್ಯಾರ್ಥಿಗಳ ಸಾಮಾನ್ಯ ಜ್ಞಾನ ಹೆಚ್ಚುತ್ತಿಲ್ಲ. ಅವರ ಕೈಯಲ್ಲಿರುವ ಮೊಬೈಲಿನಲ್ಲಿ ಎಲ್ಲವೂ ಇರುತ್ತದೆ. ಆದರೆ ಅದು ತಲೆಯಲ್ಲಿರುವುದಿಲ್ಲ. ಈಗ ವಿದ್ಯಾರ್ಥಿಗಳು ಸಾಮಾನ್ಯ ಜ್ಞಾನದತ್ತ ತಲೆ ಕೆಡಿಸಿಕೊಳ್ಳುವುದು ಸ್ಪರ್ಧಾತ್ಮಕ ಪರೀಕ್ಷೆ ತೆಗೆದುಕೊಂಡಾಗ ಮಾತ್ರ. ಆದರೆ ಸಾಮಾನ್ಯ ಜ್ಞಾನವೆಂಬುದು ರಾತ್ರೋ ರಾತ್ರಿ ಕಲಿಯಲ್ಪಡುವುದಲ್ಲ. ನಿರಂತರವಾಗಿ ಪತ್ರಿಕೆಗಳನ್ನು ಓದುತ್ತಿದ್ದರೆ, ಜಗತ್ತಿನ ವಿಷಯಗಳ ಪುಸ್ತಕಗಳನ್ನು ಓದುತ್ತಿದ್ದರೆ ತಾನಾಗಿ ಬರುತ್ತದೆ. ಇಂದು ಎಲ್ಲೇ ಕೆಲಸ ತೆಗೆದುಕೊಳ್ಳಬೇಕಾದರೆ ನಿಮ್ಮ ಸಾಮಾನ್ಯ ಜ್ಞಾನ ಪರೀಕ್ಷೆಗೆ ಒಳಪಡುತ್ತದೆ.

ಪತ್ರಿಕೆಯು ಮುಂದಿನ ತಿಂಗಳು ಎರಡು ವರ್ಷಗಳನ್ನು ಪೂರೈಸಲಿದೆ. ಇನ್ನು ಮುಂದೆಯೂ ಇದೇ ರೀತಿ ಸಹಕಾರವನ್ನು ನೀಡಬೇಕೆಂದು ಕೋರಿದೆ. ಆಗಸ್ಟ್ 2017ರ ಮಾಹೆಯಲ್ಲಿ ಮಹಿಳಾ ವಿಶೇಷ ಬಳಗವನ್ನು ರಚಿಸಲಾಗುವುದು. ಪತ್ರಿಕೆಗೆ ಚಂದಾದಾರರು, ಆಜೀವ ಸದಸ್ಯರು, ಸಹಾಯ ಮಾಡುವವರು ಬಳಗಕ್ಕೆ ಬಂದು ಸೇರಬೇಕೆಂದು ಕೋರಲಾಗಿದೆ.

*ಸಂಪಾದಕ*

**ಹೆಚ್.ವಿ. ಸುಬ್ಬರಾವ್**

ನಿವೃತ್ತ ಸಾ.ಶಿ.ಇ. ನೌಕರ

---

**ಸೂಚನೆ:** ಬಿಡಿಪ್ರತಿಯು ಇನ್ನು ಮುಂದೆ ರೂ. 10-00 ಆಗಲಿದೆ.


**ಮಹಿಳಾ ವಿಶೇಷ**

MAHILA VISHESHA

**ಕನ್ನಡ ತಿಂಗಳ ಪತ್ರಿಕೆ**

**ಆಗಸ್ಟ್, 1-31 2017**

KANNADA MONTHLY

AUGUST 1-31, 2017

ಸಂಪುಟ 2, ಸಂಚಿಕೆ 12, ಪುಟ: 24

Price/ಬೆಲೆ : ರೂ. 5-00

Vol. 2, Issue 12, Pages: 24

ಮುಖಪುಟ:

**ಕಟೀಲು ದುರ್ಗಾಪರಮೇಶ್ವರಿ ದೇವಸ್ಥಾನ**

ಗೌರವ ಸಂಪಾದಕರು:

**ಶ್ರೀಮತಿ ಸತ್ಯಭಾಮಾ ದಾಸ್**

**ಶ್ರೀಮತಿ ಗೀತಾ ರಾವ್**

ಸಂಪಾದಕರು:

**ಹೆಚ್.ವಿ. ವೆಂಕಟಸುಬ್ಬರಾವ್**

ಮೊಬೈಲ್ 88803-34444

ಉಪಸಂಪಾದಕರು:

**ಎಸ್.ವೆಂಕಟರವಣಪ್ಪ**

**ಸಾವಿತ್ರಿ ಎಂ.ಸಿ.**

ಕಛೇರಿ ವಿಳಾಸ:

ನಂ. 612, ಕೇರಾಫ್ ಮೆಟ್ರೋ ಟೈಲರ್ಸ್, ನಾರಾಯಣಶಾಸ್ತ್ರಿ ರಸ್ತೆ, ಶಾಂತಲಾ ಸಿಗ್ನಲ್ ಲೈಟ್ ಹತ್ತಿರ, ಕೆ.ಆರ್. ಮೊಹಲ್ಲಾ, ಮೈಸೂರು-24.

E-mail: mahilavishesha@yahoo.com

Web: www.mahilavishesha.in




# ಘಂಟೆ ಗಣಪ

ಮಂಗಳೂರಿನ ಹೈವೇಯಿಂದ ಧರ್ಮಸ್ಥಳಕ್ಕೆ ಹೋಗುವ ಮಾರ್ಗದಲ್ಲಿ ಹತ್ತು ನಿಮಿಷ ಪ್ರಯಾಣ ಸಾಗಿದ ನಂತರ, ಸ್ವಲ್ಪ ದೂರದಲ್ಲಿ 'ಸೌತಡ್ಕ ಗಣಪತಿ ದೇವಸ್ಥಾನಕ್ಕೆ ದಾರಿ' ಎಂಬ ದ್ವಾರ ಮತ್ತು ನಾಮಫಲಕವಿದೆ. ಆ ಹೆಬ್ಬಾಗಿಲಿನಿಂದ ಕಿರಿದಾದ ರಸ್ತೆಯಲ್ಲಿ ಸಾಗಿ ಮೂರು ಕಿ.ಮೀ. ದಾಟಿದ ನಂತರ ಈ ದೇವಸ್ಥಾನ ಸಿಗುತ್ತದೆ.

ಮರಗಳ ಉದ್ಯಾನದಲ್ಲಿ ಮರದ ನೆರಳಿನಲ್ಲಿ ತಣ್ಣಗೆ ತಂಪಾಗಿ ಕುಳಿತಿದ್ದಾನೆ ಮಹಾಗಣಪತಿ! ಗುಡಿಯಿಲ್ಲ, ಗೋಪುರವಿಲ್ಲ, ಮುಖದ್ವಾರವಿಲ್ಲ! ವಿಐಪಿ ಎಂಟ್ರಿ, ಶೀಘ್ರ ದರ್ಶನ ಎಂದು ಕರೆಯಲ್ಪಡುವ ಟಿಕೇಟುಗಳೂ ಇಲ್ಲ! ದರ್ಶನಕ್ಕೆ ಕ್ಯೂನಲ್ಲಿ ಕಾಯುವ ಪ್ರಶ್ನೆಯೇ ಇಲ್ಲ. ಎಲ್ಲರಿಗೂ ಒಂದೇ ದರ್ಶನ.

ಇಲ್ಲಿನ ಮಹಾಗಣಪತಿಗೆ, ಧರೆಗೆ ಸುರಿಯುವ ಮಳೆಯೇ ಮಹಾಭಿಷೇಕ, ಸೂರ್ಯನೇ ಬೆಳಕು, ಗಾಳಿಯೇ ಬೀಸುವ ಚಾಮರ, ಮರಗಳ ನೆರಳೇ ಸೂರು. ಬೆಳ್ಳಿ ಬಂಗಾರ, ಹಣ, ಆಸ್ತಿಯೇ ಪ್ರಧಾನವಾಗಿರುವ ಇಂದಿನ ದೇವಸ್ಥಾನಗಳು, ಸಂಪತ್ತನ್ನು ಕ್ರೋಢೀಕರಿಸುವ ಕೇಂದ್ರಗಳಾಗಿ ಪರಿವರ್ತನೆಯಾಗುತ್ತಿವೆ. ಆದರೆ ಇಲ್ಲಿ ಪ್ರಕೃತಿಯ ಮಡಿಲಲ್ಲಿ ಸೂರಿಲ್ಲದ ಈ ಗಣಪ ಕೊಂಚ ಭಿನ್ನ.

ಇಷ್ಟೊಂದು ಸರಳ ಸುಂದರ ಗಣಪ ಇಲ್ಲಿ ಹೇಗೆ ಬಂದ? ತುಂಬ ಹಿಂದೆ ಗೋವುಗಳನ್ನು ಗೋಪಾಲಕರು, ಕುಕ್ಕಡ ಎಂದು ಕರೆಯಲ್ಪಡುವ ಕಾಡಿನ ಸುತ್ತಮುತ್ತ ತಮ್ಮ ಗೋವುಗಳನ್ನು ಮೇಯಿಸಿಕೊಂಡು ಬರುತ್ತಿದ್ದರಂತೆ. ಹೀಗೆ ಒಂದು ದಿನ ಈ ಗೋವುಗಳನ್ನು ಮೇಯಿಸಲು ಬಂದ ಗೋಪಾಲಕರಿಗೆ, ದಟ್ಟವಾಗಿ ಬೆಳೆದು ನಿಂತ ಗಿಡಗಳ ಪೊದೆಯೊಳಗೆ ಅರ್ಧ ಮಣ್ಣಲ್ಲಿ ಭೂಗತವಾಗಿದ್ದ ಗಣಪನ ವಿಗ್ರಹ ಕಣ್ಣಿಗೆ ಬಿದ್ದಿತಂತೆ. ಅವರು ಈ ಸ್ಥಳವನ್ನು ಸ್ವಚ್ಛ ಮಾಡಿ, ಮಣ್ಣಿನಲ್ಲಿ ಹೂತಿದ್ದ ಈ ಮೂರ್ತಿಯನ್ನು ಮೇಲಕ್ಕೆ ಎತ್ತಿ ನಿಲ್ಲಿಸಿದರಂತೆ. ಬಳಿಕ ಮೂರ್ತಿಯನ್ನು ಅನತಿ ದೂರದಲ್ಲಿದ್ದ ದೊಡ್ಡ ಮರಗಳ ತೋಪಿಗೆ ತೆಗೆದುಕೊಂಡು ಬಂದು, ಒಂದು ಮರದ ನೆರಳಿನಲ್ಲಿ, ಅಡಿಗಲ್ಲನ್ನು ಇಟ್ಟು, ಮರದ ಬುಡಕ್ಕೆ ಆಶ್ರಯ ಮಾಡಿ ಪ್ರತಿಷ್ಠಾಪಿಸಿದರಂತೆ.

ಈ ಸಮಾರಂಭಕ್ಕೆ ಯಾವ ದೊಡ್ಡ ಮಠಾಧೀಶರಾಗಲೀ, ರಾಜಕಾರಣಿಗಳಾಗಲೀ ಬರಲಿಲ್ಲ, ಸಮಾರಂಭ ನಡೆಯಲಿಲ್ಲ, ಗೋಪಾಲಕರು ಮಧ್ಯಾಹ್ನದ ಊಟಕ್ಕೆ ತಾವು ತಂದಿದ್ದ ಸೌತೆಕಾಯಿಯನ್ನು ಕತ್ತರಿಸಿ ಹೋಳುಗಳನ್ನು ಗಣಪನಿಗೆ ಅರ್ಪಿಸಿದರು. ಸೌತೆಕಾಯಿಯನ್ನು ನೈವೇದ್ಯವಾಗಿ ಅರ್ಪಿಸಿದ್ದರಿಂದ ಈ ಗಣಪನಿಗೆ ಸೌತಡ್ಕ ಗಣಪತಿ ಎಂದೇ ಹೆಸರು ಬಂತು.

1965ರಿಂದೀಚೆಗೆ ಜೆ. ಕೃಷ್ಣಭಟ್ ಅವರ ಕುಟುಂಬ ಈ ಗಣಪನಿಗೆ ನಿತ್ಯಪೂಜೆ ನಡೆಸುತ್ತಿದೆ. 1973ರಲ್ಲಿ ಭಕ್ತ ಸಮೂಹ ಸೇರಿ ಒಂದು ಕಟ್ಟೆ ನಿರ್ಮಾಣ ಮಾಡಿ, ಜಗಲಿಯ ಮೇಲೆ ಈ ಮೂರ್ತಿಯನ್ನು ಪ್ರತಿಷ್ಠಾಪಿಸಿದರು. ಇಲ್ಲಿ ಒಂದು ವಿಶಿಷ್ಟ ಆಚರಣೆ ಎಂದರೆ, ಇಲ್ಲಿಗೆ ಬಂದವರೆಲ್ಲ ತಮ್ಮ ಇಷ್ಟಾರ್ಥಗಳು ಫಲಿಸಲೆಂದು ಗಣಪನಿಗೆ ಘಂಟೆಯನ್ನು ಕಾಣಿಕೆಯಾಗಿ ನೀಡುವುದು.

# ಸಂಪ್ರದಾಯ, ಆಚಾರ-ವಿಚಾರ

ಮನೆಯೇ ಮಂತ್ರಾಲಯ ಎನ್ನುತ್ತಾರೆ. ಹಾಗೆ ನಾವು ವಾಸ ಮಾಡುವ ಮನೆ ದೇವಾಲಯವಿದ್ದಂತೆ. ಅದನ್ನು ಸುಂದರ, ಸ್ವಚ್ಛವಾಗಿಡುವುದು ಗೃಹಿಣಿಯ ಆದ್ಯ ಕರ್ತವ್ಯ. ಇಡೀ ಮನೆಯ ಜವಾಬ್ದಾರಿ ಆ ಮನೆಯ ಒಡತಿಯದ್ದು. ಸಂಪ್ರದಾಯ ಸಂಸ್ಕೃತಿ, ಆಚಾರ ವಿಚಾರಗಳನ್ನು ಪಾಲಿಸಬೇಕಾಗುತ್ತದೆ. ಮನೆಯನ್ನು ಅಚ್ಚುಕಟ್ಟಾಗಿ ಇಡಬೇಕಾಗುತ್ತದೆ.

ಸದ್ಗೃಹಿಣಿಯಾದವಳು ಕೆಲವೊಂದು ನೀತಿ ನಿಯಮಗಳನ್ನು ಪಾಲಿಸದಿದ್ದರೆ ಮನೆಯಲ್ಲಿ ದಾರಿದ್ರ್ಯ ಲಕ್ಷ್ಮಿ ತಾಂಡವವಾಡುತ್ತಾಳೆ. ಮನೆಯ ಸದಸ್ಯರ ಒಳಿತಿಗಾಗಿ ಅನುಸರಿಸಬೇಕಾದ ಕೆಲವೊಂದು ಸಲಹೆಗಳು ಇಲ್ಲಿವೆ.

ಮುಸ್ಸಂಜೆ ದೀಪ ಹೊತ್ತಿಸಿದ ಮೇಲೆ ಮನೆಯ ಕಸ ಗುಡಿಸಬೇಡಿ.

ರಾತ್ರಿ ಮಗಲುವ ಮುನ್ನ ಕಸ ಗುಡಿಸಿದರೆ ರಾತ್ರಿ ಕಸವನ್ನು ಹೊರಗೆ ಹಾಕಬೇಡಿ.

ಮನೆಯ ಬಾಗಿಲಿನ ಹೊಸ್ತಿಲಿನ ಮೇಲೆ ನಿಲ್ಲಬೇಡಿ.

ಸಂಜೆ ದೀಪ ಹಚ್ಚುವ ಮುನ್ನ ಮುಂದಿನ ಬಾಗಿಲು ತೆರೆದು ಹಿಂದಿನ ಬಾಗಿಲನ್ನು ಮುಚ್ಚಿ.

ಮೊರ ಪೊರಕೆಗಳನ್ನು ಕಾಲಿನಿಂದ ತುಳಿಯಬೇಡಿ. ಪೊರಕೆ ಲಕ್ಷ್ಮಿ ಇದ್ದಂತೆ.

ಮನೆ ಬಾಗಿಲ ಎದುರು ಪಾದರಕ್ಷೆಗಳನ್ನು ಬಿಡಬಾರದು.

ಮನೆಯ ಸಾರಿಸಿದ ಮೇಲೆ ರಂಗೋಲಿ ಹಾಕದೆ ಖಾಲಿ ಬಿಡಬಾರದು. ಇದು ಅಶುಭ ಸೂಚಕ.

ಮಂಗಳವಾರ ಶುಕ್ರವಾರ ಮನೆಯಲ್ಲಿ ಜಗಳವಾಡುವುದು, ಅವಾಚ್ಯ ಶಬ್ದಗಳಿಂದ ಯಾರನ್ನೂ ಬಯ್ಯಬೇಡಿ.

ಹರಿದುಹೋದ ಬಟ್ಟೆಯನ್ನು ಧರಿಸಬಾರದು.

ಕೈಕಾಲುಗಳ ಉಗುರುಗಳನ್ನು ತುಂಬಾ ಬೆಳೆಸಬಾರದು. ಮಂಗಳವಾರ ಹಾಗೂ ಶುಕ್ರವಾರ ಉಗುರು ಕತ್ತರಿಸಬಾರದು.

ಕೆದರಿದ ಜಡೆ, ಕುಂಕುಮವಿರದ ಹಣೆ, ಅರಿಶಿನ ಹಚ್ಚದ ಕೈಕಾಲುಗಳು ಮಹಿಳೆಯರಿಗೆ ಅಶುಭ ಸೂಚಕ.

ಚಾಪೆ ಹಾಸಿಗೆ, ಸೋಫಾ, ಮೇಲೆ ಕುಳಿತು ದೇವರ ಪೂಜೆ ಮಾಡಬೇಡಿ.

ಮಹಿಳೆಯರು ನಡೆಯುವಾಗ ಕಾಲಿನಿಂದ ತುಂಬಾ ಸದ್ದು ಮಾಡಬಾರದು.

ಆಧುನಿಕತೆ ಎಷ್ಟೇ ಮುಂದುವರಿದರೂ ಮನೆಗೆ ಒಳಿತಾಗುವ ಆಚಾರ ವಿಚಾರ ಸಂಪ್ರದಾಯಗಳನ್ನು ಅನುಸರಿಸುವುದನ್ನು ಮರೆಯಬಾರದು.

ಇದು ಒಳ್ಳೆಯದು ಅನ್ನಿಸಿದರೆ ಆಚರಿಸಿ, ಇಲ್ಲವಾದಲ್ಲಿ ಸುಮ್ಮನಿದ್ದುಬಿಡಿ.

*-ವತ್ಸಲಾ, ಬೆಂಗಳೂರು*



# ನೀರೆಯರೇ ಸೀರೆ ಉಡುವ ಮುನ್ನ ಈ ಆರು ವಿಷಯ ನೆನಪಿಸಿ

ಹುಡುಗಿಯರಿಗೆ ಸೀರೆ ಉಡೋದಂದ್ರೆ ಎಲ್ಲಿಲ್ಲದ ಹಿಗ್ಗು. ಅದ್ರಲ್ಲೂ ಫಸ್ಟ್ ಟೈಂ ಸೀರೆ ಉಟ್ಟಾಗ ಪಕ್ಕದ ಮನೆ ಆಂಟಿಗೆ, ಮಹಡಿ ಮನೆ ಅಜ್ಜಿಗೆ (ಅಜ್ಜಿ ಮನೇಲಿರೋ ಹುಡುಗ ಕೂಡ ಇರಬಹುದು) ಅಷ್ಟೇ ಯಾಕೆ ಎದುರು ಮನೆಯ ಚಿಕ್ಕ ಹುಡುಗಿಗೂ ಸೀರೆ ಉಟ್ಟಿರೋದನ್ನ ತೋರಿಸಿ ಹೇಗ್ ಕಾಣ್ತಿದ್ದೀನಿ ಅಂತ ಕೇಳದೇ ಇರಲ್ಲ. ಚಿಕ್ಕವರಿದ್ದಾಗ ಮನೇಲಿ ಯಾರೂ ಇಲ್ಲದಾಗ ಕಪಾಟಿನಿಂದ ಅಮ್ಮನ ಸೀರೆ ತೆಗೆದು, ನೆರಿಗೆ ಹಾಕಿ ಹಾಗೋ ಹೀಗೋ ಸೀರೆ ಸುತ್ಕೊಂಡು ಹೋಗಿ ಕನ್ನಡಿ ಮುಂದೆ ನಿಂತು ನೋಡಿದ್ದು ಎಲ್ಲಾ ಹುಡುಗಿಯರಿಗೂ ನೆನಪಿರುತ್ತೆ. ಆದ್ರೆ ಶಾಲೆ ಸಮಾರಂಭಕ್ಕೋ ಅಥವಾ ಕಾಲೇಜಿನಲ್ಲಿ ಎತ್ನಿಕ್ ಡೇ ಇದ್ದಾಗ ಇಷ್ಟ ಬಂದಂತೆ ಸೀರೆ ಸುತ್ಕೊಂಡು ಹೋಗೋಕೆ ಆಗಲ್ಲ. ಆಗ ಅಮ್ಮನ ಸಹಾಯ ಬೇಕೇ ಬೇಕು. ಹಾಗೆ ಸೀರೆ ಉಡಿಸಿಕೊಂಡು ಕಾಲೇಜಿಗೆ ಹೋದ ಮೇಲೆ ನೀವು ಅದನ್ನ ಯಾವ ರೀತಿ ಮ್ಯಾನೇಜ್ ಮಾಡ್ತೀರಾ ಅನ್ನೋದು ಕೂಡ ಮುಖ್ಯ. ಫಸ್ಟ್ ಟೈಂ ಆಗ್ಲಿ, ಸೋ ಮೆನಿ ಟೈಂ ಆಗ್ಲಿ ಸೀರೆ ಉಡೋವಾಗ ಈ ಆರು ವಿಷಯವನ್ನು ಖಂಡಿತ ನೆನಪಿಡಿ.

**1. ಯಾವ ಸೀರೆ ಉಡೋದು**

ಅಬ್ಬಬ್ಬಾ... ಇದನ್ನಂತೂ ನಾವು ಹೇಳೋದೇ ಬೇಡ. ಯಾಕಂದ್ರೆ, ಸೀರೆ ಉಡಬೇಕು ಅಂತ ಅನ್ಕೊಂಡ 15 ದಿನ ಮುಂಚೇನೇ ಹುಡುಗಿಯರು ಒಂದ್ಸಲ ಬೀರು ಜಾಲಾಡಿ ಸೀರೆ ತೆಗೆದಿಟ್ಕೊಂಡಿರ್ತೀರ. ಆದರೆ ನೀವು ಉಡೋ ಸೀರೆಯನ್ನು ಸಲೀಸಾಗಿ ಮ್ಯಾನೇಜ್ ಮಾಡಬಹುದೋ ಇಲ್ಲವೋ ಅನ್ನೋದನ್ನ ಯೋಚಿಸಿ ಸೀರೆ ಸೆಲೆಕ್ಟ್ ಮಾಡಿ. ಆ ಸೀರೆಯನ್ನು ಮೊದಲೇ ಒಂದು ಉಟ್ಟು ಟ್ರಯಲ್ ನೋಡಿ. ಮೊದಲ ಬಾರಿ ಸೀರೆ ಉಡುತ್ತಿದ್ದರೆ ಕಡಿಮೆ ತೂಕವಿರುವ ಸೀರೆ ಅಥವಾ ಕಾಟನ್ ಸೀರೆ ಉಡೋದು ಸೂಕ್ತ. ರೇಶಿಮೆ ಸೀರೆ ಅಥವಾ ಹೆಚ್ಚು ತೂಕವಿರೋ ಸೀರೆ ಉಟ್ರೆ, ಕಂಫರ್ಟಬಲ್ ಆಗಿ ಇರಲು ಸಾಧ್ಯವಿಲ್ಲ.



**2. ಬ್ಲೌಸ್**

ಸೀರೆಗೆ ತಕ್ಕಂತೆ ಬ್ಲೌಸ್ ಕೂಡ

ಹೊಂದಿಕೆಯಾಗುವಂತಿರಬೇಕು. ನಿಮ್ಮ ದೇಹಕ್ಕೆ ಫಿಟ್ ಆಗದಿರುವ ಬ್ಲೌಸ್ ಖಂಡಿತ ಧರಿಸಬೇಡಿ. ನಿಮ್ಮ ದೇಹದ ಅಳತೆಗೆ ತಕ್ಕಂತೆ ಬ್ಲೌಸ್ ಹೊಲಿಸಿಕೊಳ್ಳಿ. ಅಥವಾ ಈಗ ಮಾರ್ಕೆಟ್‌ನಲ್ಲಿ ಲಭ್ಯವಿರುವ ರೆಡಿಮೇಡ್ ಬ್ಲೌಸ್ ಖರೀದಿಸಿ. ಸ್ಲೀವ್‌ಲೆಸ್, ಮೆಗಾ ಸ್ಲೀವ್, ಫುಲ್ ಆರ್ಮ್ ಬ್ಲೌಸ್ ಹೀಗೆ ನಿಮಗೆ ಇಷ್ಟವಾಗುವ ಯಾವುದೇ ಡಿಸೈನಿನ ಬ್ಲೌಸ್ ಆದರೂ ಅದು ನಿಮಗೆ ಫಿಟ್ ಆಗುವಂತಿರಲಿ.

**3. ತೀರಾ ಕೆಳಗೆ ಅಥವಾ ತೀರಾ ಮೇಲಕ್ಕೆ ಸೀರೆಯನ್ನು ಉಡಬೇಡಿ**

ಸೀರೆ ಉಡುವಾಗ ಗಮನದಲ್ಲಿಡಬೇಕಾದ ಮತ್ತೊಂದು ಅಂಶವೆಂದರೆ ತೀರಾ ಮೇಲಕ್ಕೆ ಅಥವಾ ತೀರಾ ಕೆಳಕ್ಕೆ ಸೀರೆಯನ್ನು ಉಡದಿರುವುದು. ಪೆಟಿಕೋಟ್ ಭದ್ರವಾಗಿ ಕಟ್ಟಿ ಸೀರೆ ಉಡೋಕೆ ಶುರು ಮಾಡಿ. ಸೊಂಟದಿಂದ ತೀರಾ ಮೇಲಕ್ಕೆ ಸೀರೆ ಉಟ್ಟರೆ ನೆರಿಗೆಗಳಿಂದ ಹೊಟ್ಟೆ ದಪ್ಪ ಕಾಣುತ್ತದೆ. ಅಥವಾ ಅಗತ್ಯಕ್ಕಿಂತ ಕೆಳಗೆ ಉಟ್ಟರಂತೂ ನಾವು ಹೇಳೋದೇ ಬೇಡ. ಆದ್ದರಿಂದ ನೀವು ಸಿಲ್ಕ್ ಸ್ಮಿತಾ ಥರಾ ಕಾಣ್ತೀರೋ ಇಲ್ಲ ಶಿಲ್ಪಾ ಶೆಟ್ಟಿ ಥರ ಕಾಣ್ತೀರೋ ನೀವೇ ಡಿಸೈಡ್ ಮಾಡಿ.

**4. ಸೇಫ್ಟಿ ಪಿನ್‌ಗಳನ್ನು ಸೇಫ್ಟಿಗಾಗಿ ಮಾತ್ರ ಉಪಯೋಗಿಸಿ**

ಸೀರೆ ಇದ್ದ ಜಾಗದಲ್ಲೇ ಇರಬೇಕೆಂದರೆ ಸೇಫ್ಟಿ ಪಿನ್‌ಗಳನ್ನು ಖಂಡಿತ ಉಪಯೋಗಿಸಿ. ಆದ್ರೆ ಪಿನ್‌ಗಳ ಗೊಂಚಲು ಇದೆ ಅಂತ ಸಿಕ್ಕ ಸಿಕ್ಕ ಕಡೆಯಲ್ಲೆಲ್ಲಾ ಪಿನ್ ಹಾಕಬೇಡಿ. ನೆರಿಗೆ ಕೂರಿಸಲು, ಸೆರಗಿಗೆ ಮತ್ತು ಅಗತ್ಯವಿದ್ದರೆ ಬ್ಲೌಸ್‌ಗೆ ಮಾತ್ರ ಪಿನ್ ಉಪಯೋಗಿಸಿ. ಸೇಫಾಗಿರಲಿ ಅಂತ ಎಲ್ಲೆಂದರಲ್ಲಿ ಪಿನ್ ಹಾಕಿದ್ರೆ, ಸೀರೆ ಹಾಳಾಗೋದಲ್ಲದೆ ಅದನ್ನು ತೆಗೀಬೇಕಾದ್ರೆ ತುಂಬಾ ಫಜೀತಿ ಪಡಬೇಕಾಗುತ್ತೆ.

**5. ಸೆರಗು**

ಸೀರೆಯನ್ನು 5–6 ಮಡಿಕೆ ಮಡಿಚಿ ನೀಟಾಗಿ ಸೆರಗಿನ ನೆರಿಗೆ ಹಾಕಬಹುದು. ಅಥವಾ ಒಂದೆಳೆಯಲ್ಲಿ ಪಿನ್ ಮಾಡಬಹುದು. ಎರಡರಲ್ಲಿ ಯಾವುದೇ ಮಾಡಿದರೂ ನಿಮ್ಮ ಸೆರಗು ನೆಲಕ್ಕೆ ತಾಗುವಷ್ಟು ಉದ್ದ ಇರಬಾರದು. ಸೆರಗು ಸಾಧ್ಯವಾದಷ್ಟು ಮಂಡಿಯುದ್ದದಷ್ಟಿದ್ದರೆ ಸಾಕು. ಒಂದು ವೇಳೆ ತೀರಾ ಉದ್ದವಾದರೆ ಕಾಲೇಜಿನ ನೆಲ ಗುಡಿಸಿದ ಭಾಗ್ಯ ನಿಮ್ಮದೇ. ಆದರೆ ಮನೆಗೆ ಹೋದ್ಮೇಲೆ ಅಮ್ಮನಿಂದ ಮಂಗಳಾರತಿ ಕೂಡ ತಪ್ಪಿದ್ದಲ್ಲ.

**6. ಚಪ್ಪಲಿ**

ಸೀರೆ ಉಟ್ಟಾಗ ಫ್ಲಾಟ್ ಚಪ್ಪಲಿಗಳನ್ನು ಧರಿಸಬೇಡಿ. ಹಾಗಂತ ಹೈಹೀಲ್ಸ್ ಹಾಕಿ ನಡೆದರೆ ನೆರಿಗೆ ಕಾಲಿಗೆ ತಾಗಿ ಬಿದ್ದೀರಿ ಹುಷಾರು. ಹೀಗೆಲ್ಲಾ ಆಗಬಾರದು ಅಂತಿದ್ರೆ ಮಧ್ಯಮ ಎತ್ತರದ ಸೋಲ್ ಇರುವ ಚಪ್ಪಲಿ ಧರಿಸಿ. ಸೀರೆ ಉಟ್ಟಾಗ ನೀರೆಯಂತೆ ಗಂಭೀರವಾಗಿ ನಡೆಯಿರಿ. ಜೋರಾಗಿ ನಡೆಯುವುದು ಓಡೋದು ಮಾಡಬೇಡಿ ನೆರಿಗೆಗಳು ಚಪ್ಪಲಿಗೆ ಸಿಕ್ಕಿಹಾಕಿಕೊಳ್ಳದಂತೆ ಗಮನ ವಹಿಸಿ.

ಇದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಸೀರೆ ಉಟ್ರೆ ಅಮ್ಮನಿಂದ ದೃಷ್ಟಿಬೊಟ್ಟು, ಪಕ್ಕದ ಮನೆ ಆಂಟಿಯಿಂದ ಕಾಂಪ್ಲಿಮೆಂಟು ಗ್ಯಾರಂಟಿ.



# ಅನ್ನದ ಋಣ

ಕೇದಾರಪುರ ಸಂಸ್ಥಾನದ ರಾಜಧಾನಿಯಿಂದ ಹೊರವಲಯದಲ್ಲಿ ಇರುವುದು ಮಲ್ಲಿಗೆ ಹಳ್ಳಿ. ಮಲ್ಲಿಗೆ ಹಳ್ಳಿ ಹೂವಿನ ಕೃಷಿಗೆ ಹೆಸರುವಾಸಿ. ಅಲ್ಲಿ ಮಲ್ಲಿಗೆ, ಸಂಪಿಗೆ, ಸೇವಂತಿಗೆ ಮೊದಲಾದ ಸುಗಂಧಿತ ಹೂಗಳನ್ನು ಬೇಸಾಯ ಮಾಡುವ ಹೂವಿನ ಕೃಷಿಕರಿದ್ದರು. ಮಲ್ಲಿಗೆ ಹಳ್ಳಿಯಲ್ಲಿ ಮಲ್ಲಿಗೆ ಸೋಮಯ್ಯನೆಂಬ ಪ್ರಸಿದ್ಧ ಮಲ್ಲಿಗೆ ಕೃಷಿ ಮಾಡುವ ರೈತನಿದ್ದ. ಅವನಿಗೆ ಸುಂದರಾಗಿ ಏಕಮಾತ್ರ ಕುವರಿಯಿದ್ದಳು. ಅವಳ ಹೆಸರು ಪುಷ್ಪಗಂಧಿನಿ. ಅವಳು ಬೆಳೆಸಿದ ಹೂಗಳನ್ನು ಮಾಲೆಕಟ್ಟಿ ಬುಟ್ಟಿಯಲ್ಲಿ ಹೊತ್ತುಕೊಂಡು ಹೋಗಿ ಕೇದಾರಪುರ ದೊರೆಯ ಅರಮನೆಯ ರಾಣಿ, ಸಖಿಯರಿಗೆ, ನರ್ತಕಿಯರಿಗೆ ಮಾರಾಟ ಮಾಡುತ್ತಿದ್ದಳು. ತದನಂತರ ಊರಿನ ಕಾಳಿಕಾದೇವಿಯ ಗುಡಿಯ ಎದುರುಗಡೆ ವ್ಯಾಪಾರ ಮಾಡುತ್ತಿದ್ದಳು. ಈ ರೀತಿಯಲ್ಲಿ ಪುಷ್ಪಗಂಧಿನಿ ತಂದೆಯ ಕಾಯಕದಲ್ಲಿ ಸಹಕಾರಿಯಾಗುತ್ತಿದ್ದಳು.

ಹೀಗೊಂದು ದಿನ ಪುಷ್ಪಗಂಧಿನಿ ಹೂ ವ್ಯಾಪಾರ ಮಾಡಿ ಬರುವಾಗ ಅಲ್ಲಿ ಆಹಾರವಿಲ್ಲದೆ ಹಸಿವಿನಿಂದ ಬೊಬ್ಬಿಡುತ್ತಿದ್ದ ಬಡಕಲು ಶರೀರದ ಗಂಡು ನಾಯಿಮರಿಯೊಂದು ಕಾಣಿಸಿತು. ಆ ಮೂಕಪ್ರಾಣಿಯ ನೋವು ಅರ್ಥ ಮಾಡಿಕೊಂಡ ಪುಷ್ಪಗಂಧಿನಿ ಅದನ್ನು ಮನೆಗೆ ಹೊತ್ತುತಂದು ಹಾಲು ಅನ್ನ ಕೊಟ್ಟು ಚೆನ್ನಾಗಿ ಸಾಕಿದಳು. ಚೆನ್ನಾಗಿ ಬುದ್ಧಿ ಕಲಿತ ನಾಯಿಗೆ 'ವಾಸು' ಎಂದು ಹೆಸರಿಟ್ಟಳು. ಪುಷ್ಪಗಂಧಿನಿ ಎಲ್ಲಿಗೆ ಹೊರಟರೂ ಅವಳನ್ನು ಹಿಂಬಾಲಿಸಿ ಬರುತ್ತಿತ್ತು. ಅಷ್ಟರಮಟ್ಟಿಗೆ ಅವರಿಬ್ಬರ ನಡುವೆ ಬಿಟ್ಟಿರಲಾರದ ನಂಟಾಗಿತ್ತು.

ಮಟಮಟ ಮಧ್ಯಾಹ್ನದ ಏರುಹೊತ್ತಿನ ಸಮಯದಲ್ಲಿ ಪುಷ್ಪಗಂಧಿನಿ ಪಟ್ಟಣದಲ್ಲಿ ಹೂವ್ಯಾಪಾರ ಮಾಡಿ ಹಿಂತಿರುಗಿ ಬರುವಾಗ ನಡುದಾರಿಯಲ್ಲಿ ಕಾಮುಕನೊಬ್ಬ ತಡೆದು ನಿಲ್ಲಿಸಿದ. ಆತ ಪುಷ್ಪಗಂಧಿನಿಯ ಸೌಂದರ್ಯದ ಮೇಲೆ ಕಣ್ಣಿಟ್ಟಿದ್ದ. ಸಮಯ ಸಂದರ್ಭಕ್ಕಾಗಿ ಕಾಯುತ್ತಿದ್ದ. ಪುಷ್ಪಗಂಧಿನಿಯ ಸೀರೆ ಸೆರಗೆಳೆದು ಬಲಾತ್ಕರಿಸಲು ಯತ್ನಿಸಿದ. ಮಾನ ರಕ್ಷಣೆಗಾಗಿ ಪುಷ್ಪಗಂಧಿನಿ ವಾಸು... ವಾಸು... ಎಂದು ಬೊಬ್ಬಿಟ್ಟಳು. ಆಕ್ರಂದನ ಆಲಿಸಿದ ವಾಸು ನಾಯಿ ಎಲ್ಲಿಂದಲೋ ಶರವೇಗಲ್ಲಿ ಓಡಿಬಂದು ಕಾಮುಕನನ್ನು ಕಚ್ಚಿ ರಕ್ತಬರಿಸಿ ಅಟ್ಟಿಸಿತು.

ಪುಷ್ಪಗಂಧಿನಿ ಕಣ್ಣೀರು ಹಾಕುತ್ತ 'ಮೂಕಪ್ರಾಣಿಯಾದ ವಾಸು ನಿನಗೆ ನಿಯತ್ತಿದೆ. ಅನ್ನದ ಋಣದ ಅರಿವಿದೆ. ಆದರೆ ಈ ಅಸುರಿ ಗುಣದ ಕೆಲವು ಮನುಜರ ಬಗ್ಗೆ ಅಸಹ್ಯ ಎನ್ನಿಸುತ್ತಿದೆ. ನೀನು ನನ್ನನ್ನು ಕಾಪಾಡಿದ ನಾರಾಯಣರೂಪಿ ಭಗವಂತ' ಎನ್ನುತ್ತ ಮನೆಯ ಹಾದಿಯತ್ತ ನಡೆಯಲಾರಂಭಿಸಿದಳು. ವಾಸು ಬೆಂಗಾವಲಾಗಿ ಅವಳನ್ನು ಹಿಂಬಾಲಿಸಿದ.

–*ತಾರಾನಾಥ್ ಕುಂದಾಪುರ*

# ಬಾವುಟ ನುಣುಚಿಕೊಂಡು ಹಾರುವುದೇಕೆ?



ಬಾವುಟ ಹಾರುವುದು ಹೇಗೆ? ಅದು ಒಂದೇ ಸಮನೆ ಸ್ಥಿರವಾಗಿ ಹಾರದೇ ಅಲೆಯಲೆಯಂತೆ ನುಣುಚಿಕೊಂಡು ಹಾರುವುದೇಕೆ?

ಹಾರುವ ಧ್ವಜದಲ್ಲಿ ನಾಲ್ಕು ರೀತಿಯ ಬಲಗಳು ಸಂಬಂಧಪಟ್ಟಿವೆ. ಬಾವುಟ ದಾರದೊಂದಿಗೆ ಕಟ್ಟಲ್ಪಟ್ಟಿದೆ. ಅದು ಹಾರುವಾಗ ಬಹಳ ದೂರ ಚಲಿಸಿಹೋಗದೆ ಅಂದರೆ ಕಂಬದ ಪಕ್ಕದಲ್ಲಿಯೇ ಹಾರುತ್ತದೆ. ಹೀಗೆ ಕಂಬದತ್ತ ಧ್ವಜವನ್ನು ಸೆಳೆಯುತ್ತಿರುವುದು ಒಂದು ಬಲ.

ಎರಡನೆಯದಾಗಿ ಗುರುತ್ವಾಕರ್ಷಣ ಬಲ. ಇದು ಧ್ವಜವನ್ನು ಭೂಮಿಯತ್ತ ಸೆಳೆದುಕೊಂಡಿರುತ್ತದೆ. ಮೂರನೆಯ ಬಲ ಗಾಳಿ. ಇದೇ ಧ್ವಜ ಹಾರಲು ಮೂಲಭೂತವಾದ ಬಲ. ಇದರ ಪ್ರಮಾಣ ಸ್ಥಿರವಾದದ್ದಲ್ಲ, ಹೆಚ್ಚಬಹುದು ಅಥವಾ ತಗ್ಗಬಹುದು. ಅಂತೆಯೇ ಇದರ ದಿಕ್ಕು ಸ್ಥಿರವಾದದ್ದಲ್ಲ, ಆಗಾಗ ಬದಲಾಗುವಂತೆ ಇರುವಂಥದ್ದು.

ಧ್ವಜವು ಗಾಳಿಯನ್ನು ಎದುರಿಸುವಾಗ ಹಗ್ಗದೊಂದಿಗೆ ಕಟ್ಟಲ್ಪಟ್ಟಿರುವ ಬದಿಯಿಂದ ಮತ್ತೊಂದು ಬದಿಗೆ ಗಾಳಿ ಹಾಯುತ್ತದೆ. ಹೀಗಾದಾಗ ಗಾಳಿಯ ಬಲ ಧ್ವಜಕ್ಕಿಂತ ಹೆಚ್ಚಾಗಿದ್ದಾಗ ಧ್ವಜ ಚೆನ್ನಾಗಿ ಹಾರುತ್ತದೆ. ಹಾಗಿಲ್ಲದೇ ಗಾಳಿ ಬಹಳ ಕಡಿಮೆ ಪ್ರಮಾಣದಲ್ಲಿದ್ದಾಗ ಧ್ವಜ ಹಾರದೇ ಜೋತು ಬಿದ್ದುಬಿಡುತ್ತದೆ.

ಮಣ್ಣಿನ ನೆಲದ ಮೇಲೆ ತಕ್ಕ ಪ್ರಮಾಣದ ಬಲವನ್ನು ಪ್ರಯೋಗಿಸಿ ಗೋಲಿಯೊಂದನ್ನೆಸೆದರೆ ಅದು ಸ್ವಲ್ಪ ದೂರ ಚಲಿಸಿ ನಂತರ ನಿಂತುಬಿಡುತ್ತದೆ. ಅದೇ ಪ್ರಮಾಣದ ಬಲದೊಂದಿಗೆ ಅದೇ ಗೋಲಿಯನ್ನು ಮೊಸಾಯಿಕ್ ನೆಲದ ಮೇಲೆ ಎಸೆದಾಗ ಮಣ್ಣಿಗಿಂತ ಇನ್ನೂ ಹೆಚ್ಚು ದೂರ ಉರುಳಿ ಹೋಗಿ ನಿಲ್ಲುತ್ತದೆ ಇದಕ್ಕೇನು ಕಾರಣ?

ಮಣ್ಣಿನ ನೆಲದ ಮೇಲೆ ಘರ್ಷಣೆ ಹೆಚ್ಚು. ಆದರೆ ಮೊಸಾಯಿಕ್ ನೆಲದ ಮೇಲೆ ಕಡಿಮೆ. ಇದರರ್ಥ ಮಣ್ಣಿನ ನೆಲದ ಮೇಲೆ ಗೋಲಿಯ ಚಲಿಸುವಿಕೆಗೆ ತಡೆಗಳು ಹೆಚ್ಚು. ಆದರೆ ಮೊಸಾಯಿಕ್ ನೆಲದ ಮೇಲೆ ತಡೆಗಳು ಕಡಿಮೆ. ಈ ಘರ್ಷಣೆಯೂ ಒಂದು ಬಲವೇ. ಆದರೆ ಇದು ವಿರುದ್ಧ ಬಲ. ಇದೇ ಧ್ವಜ ಹಾರುವುದರಲ್ಲಿ ಸಂಬಂಧಪಟ್ಟಿರುವ ನಾಲ್ಕನೇ ಬಲ. ಧ್ವಜದ ಒಂದು ಬದಿಯಿಂದ ಮತ್ತೊಂದು ಬದಿಗೆ ಗಾಳಿ ಚಲಿಸುವಾಗ ಈ ವಿರುದ್ಧ ಬಲವನ್ನು ಎದುರಿಸಬೇಕಾಗಿರುತ್ತದೆ.

ಗಾಳಿ ಕ್ಷಣ ಕ್ಷಣಕ್ಕೂ ದಿಕ್ಕು ಬದಲಿಸಿಕೊಂಡು ಪ್ರಮಾಣವನ್ನು ಬದಲಿಸಿಕೊಂಡು ತಿರುಗುತ್ತಿರುತ್ತದೆ. ಅದಕ್ಕನುಗುಣವಾಗಿ ಬಾವುಟದಲ್ಲಿರುವ ವಿರುದ್ಧ ಬಲವೂ ಕಾರ್ಯಪ್ರವೃತ್ತವಾಗುತ್ತದೆ. ಇದರಿಂದಾಗಿಯೇ ಬಾವುಟ ಒಂದೇ ಸಮನೆ ನೇರವಾಗಿ ಹಾರದೇ ಅಲೆ ಅಲೆಯಂತೆ ನುಣುಚಿಕೊಂಡು ಹಾರುತ್ತದೆ.



# ಗಮಕಕಲೆ - ಕನ್ನಡ ನಾಡಿನ ಶ್ರೇಷ್ಠ ಕಲೆ

ಗಮಕ ಕಲೆ ಕನ್ನಡ ನಾಡಿನ ಪ್ರಾಚೀನ ಕಲೆ. ಗಮಕ ಎಂದರೆ ಗಟ್ಟಿಯಾಗಿ, ಮನನವಾಗುವಂತೆ ಕಾವ್ಯಗಳನ್ನು ಓದುವ ಕಲೆ ಎಂದೂ ಹೇಳುವುದುಂಟು. ಕಾವ್ಯದಲ್ಲಿನ ಸಾಹಿತ್ಯಕ್ಕೆ ಸ್ವಲ್ಪವೂ ಚ್ಯುತಿ ಬರದಂತೆ, ಕವಿಯ ಹೃದಯವರಿತು, ರಸಕ್ಕೆ ತಕ್ಕ ರಾಗಗಳನ್ನು ಸಂಯೋಜಿಸಿ ಎದುರಿಗಿರುವ ಶ್ರೋತೃಗಳ ಮುಂದೆ ಭಾವಪೂರ್ಣವಾಗಿ ವಾಚನ ಮಾಡುವ ಅಥವಾ ಗಾಯನ ಮಾಡುವ ವಿಶಿಷ್ಟ ಕಲೆಯೇ ಗಮಕ ಕಲೆ ಎಂದು ಪ್ರಖ್ಯಾತಿ ಪಡೆದಿದೆ.

ಆದಿಕವಿ ವಾಲ್ಮೀಕಿಯು ಬರೆದ ರಾಮಾಯಣ ಮಹಾಕಾವ್ಯವನ್ನು ಲವಕುಶರು ಸುಶ್ರಾವ್ಯವಾಗಿ, ಲಯಬದ್ಧವಾಗಿ ಶ್ರೋತೃಗಳ ಸಮಕ್ಷಮದಲ್ಲಿ ಹಾಡಿ ಸಮಸ್ತರ ಹೃದಯವನ್ನು ಹರ್ಷದಲ್ಲಿ ತೇಲಾಡಿಸಿದರು ಎಂಬುದಾಗ ಉಲ್ಲೇಖವಿದೆ. ಹೀಗಾಗಿ ಲವಕುಶರನ್ನು ಆದಿಗಮಕಿಗಳೆಂದು ಕರೆಯುತ್ತಾರೆ.

ಕನ್ನಡ ನಾಡಿಗೆ ಮಾತ್ರ ವಿಶಿಷ್ಟವಾದ ಈ ಅಪೂರ್ವ ಕಲೆಗೆ ಸಾವಿರಾರು ವರ್ಷಗಳ ನಿರಂತರ ಇತಿಹಾಸವಿದೆ. ಕವಿಗಳು ತಮ್ಮ ಅಪೂರ್ವ ಪ್ರತಿಭೆಯಿಂದ ರಚಿಸಿದ ಮಹಾಕಾವ್ಯಗಳು ಈ ಅದ್ಭುತವಾದ ಗಮಕ ಕಲೆಯಿಂದಲೇ ಜನಮಾನಸದಲ್ಲಿ ಚಿರಸ್ಥಾಯಿಯಾಗಿವೆ ಎಂದರೆ ಅತಿಶಯವಾಗಲಾರದು. ಈ ಗಮಕ ವಾಚನ ಕಲೆಯು ದಿನ ಕಳೆದಂತೆ ಕ್ರಮೇಣ ಕಾವ್ಯಗಾಯನ ಕಲೆ ಎಂದೂ ಪ್ರಖ್ಯಾತಿ ಪಡೆದಿದೆ. ಕಾವ್ಯಸೃಷ್ಟಿಯ ಕಾಲದಿಂದಲೂ ಈ ಕಲೆಯು ಕಲಾಪ್ರಪಂಚದಲ್ಲಿ ಘನತೆ, ಮಾನ್ಯತೆಯನ್ನು ಪಡೆದಿದ್ದು ಪೂಜನೀಯವೆಂದು ಜನಮನ್ನಣೆ ಗಳಿಸಿದೆ. ಸಾಹಿತ್ಯ ಪ್ರಧಾನವಾದ ಗಮಕ ಕಲೆಯಲ್ಲಿ ಸಂಗೀತಕ್ಕೂ ಮುಖ್ಯವಾದ ಸ್ಥಾನವಿದ್ದು ಸಾಹಿತ್ಯ ಸಂಗೀತಗಳೆರಡೂ ಗಮಕ ಸರಸ್ವತಿಯ ಮನೋಹರ ನಯನಗಳೆನಿಸಿವೆ.

**ಗಮಕ ಶಬ್ದದ ವ್ಯುತ್ಪತ್ತಿ:** ಗಮಕ ಎಂದರೇನು ಎಂದು ತಿಳಿಯಲು ಪ್ರಯತ್ನಿಸಿದಾಗ ಗಮಕ ಎನ್ನುವಪದ ಎಲ್ಲಿಂದ ಬಂದಿತೆಂದು ತಿಳಿಯುವುದು ಅವಶ್ಯಕ. ಗಮಕ ಎನ್ನುವುದು ಸಂಸ್ಕೃತದ ಗಮ್ ಎಂಬ ಧಾತುವಿನ ಮೇಲೆ ಣಿಚ್ ಣ್ವುಲ್ ಎಂಬ ಪ್ರತ್ಯಯಗಳು ಬಂದು ಗಮಕ ಎಂಬ ರೂಪವಾಗಿದೆಯೆಂದು ವಿದ್ವಾಂಸರ ಅಭಿಪ್ರಾಯವಾಗಿದೆ. ಗಮಕ ಎನ್ನುವ ಪದಕ್ಕೆ ಬೋಧಕ ಎಂಬ ಅರ್ಥವೂ ಇದೆ ಎಂಬುದಾಗಿ ಭವಭೂತಿ ಕವಿಯು ತನ್ನ ಮಾಲತೀ ಮಾಧವ ಎಂಬ ನಾಟಕದಲ್ಲಿ ಹೇಳಿದ್ದಾನೆ. ಗಮಕ ಎನ್ನುವ ಪದಕ್ಕೆ ಗತಿ, ನಡೆ, ಗಮನ, ರೀತಿ ಎಂಬುದಾಗಿ ಅರ್ಥೈಸುವುದೂ ಉಂಟು.

ಗಮಕಿ: ಕಾವ್ಯಗಳನ್ನು ಅತೀವ ಶ್ರದ್ಧೆಯಿಂದ ಸಮರ್ಪಣಾ ಮನೋಭಾವದಿಂದ ರಚಿಸಿರುವ ಕವಿಯ ಮನೋಭಾವಕ್ಕೆ ತಕ್ಕಂತೆ ಅವನ ಕಲ್ಪನಾಶಕ್ತಿಗೆ ಶಬ್ದರೂಪ ಕೊಟ್ಟು, ಬಹುಮುಖ್ಯವಾಗಿ ಕವಿಯ ಮನದಾಳದ ಭಾವನೆಗಳ ರಸಸಾಗರಕ್ಕೆ ಒಪ್ಪುವಂತೆ ವಿವಿಧ ರಾಗಗಳನ್ನು ಸಮರ್ಥವಾಗಿ, ಹಿತಮಿತವಾಗಿ ಸಮನ್ವಯಗೊಳಿಸಿ ಸಾಹಿತ್ಯಾರ್ಥಕ್ಕೆ ಕೊಂಚವೂ ಲೋಪ ಬಾರದಂತೆ ಪದವಿಭಾಗಗೊಳಿಸಿ ಸುಸ್ಪಷ್ಟವಾಗಿ ಸಂದೇಹಕ್ಕೆ ಎಡೆ ಇಲ್ಲದಂತೆ ಎದುರಿನಲ್ಲಿರುವ ಕಲಾರಸಿಕ ಶ್ರೋತೃಗಳ ಮುಂದೆ ಕಾವ್ಯವಾಚನ ಅಥವಾ ಗಾಯನ ಮಾಡಬಲ್ಲವನೇ ಗಮಕಿ ಎನಿಸಿಕೊಳ್ಳುತ್ತಾನೆ.

ಕಾವ್ಯವನ್ನು ರಚಿಸಿದ ಕವಿ ಮತ್ತು ಕಾವ್ಯವನ್ನು ವಾಚನದ ಮೂಲಕ ಆಲಿಸುವ ಶ್ರೋತೃಗಳ ನಡುವೆ ಗಮಕಿಯು ಸುವರ್ಣ ಸೇತುವೆಯಾಗಿ ಸಾರ್ಥಕ ಪಾತ್ರವನ್ನು ವಹಿಸುತ್ತಾನೆ. ಹೀಗೆ ಗಮಕ ಕಲೆ ಮತ್ತು ಗಮಕಿಯ ನಡುವೆ ಅವಿನಾಭಾವ ಸಂಬಂಧವಿದ್ದು, ಪರಸ್ಪರ ಚೈತನ್ಯದಾಯಕವಾಗಿದೆ.

ಈ ಗಮಕ ವಾಚನ ಕಲೆಯು ನಮ್ಮ ಸಮಾಜದಲ್ಲಿ ರಾಜ ಮಹಾರಾಜರ ಕಾಲದಿಂದಲೂ ಸದೃಢವಾಗಿ ಬೆಳೆದು ಜನಮನ್ನಣೆಯನ್ನು ಗಳಿಸಿದ್ದು, ಜನಸಾಮಾನ್ಯರೂ ಸಹ ಅತ್ಯಂತ ಪ್ರೀತಿಯಿಂದ ಗಮಕ ಕಲೆಯನ್ನು ಪ್ರೋತ್ಸಾಹಿಸುತ್ತಾ ಕಲಾಪ್ರಪಂಚಲ್ಲಿ ಗಮಕ ಕಲೆಗೆ ಗಣ್ಯಸ್ಥಾನ ಲಭಿಸುವಂತೆ ಅದರ ಏಳ್ಗೆಗೆ ಶ್ರಮಿಸಿದ್ದಾರೆ ಎಂದರೆ ಗಮಕ ಕಲೆಯ ಶಕ್ತಿ, ಸಾಮರ್ಥ್ಯ, ಜನಪ್ರಿಯತೆಯ ಅರಿವು ನಮ್ಮದಾಗುತ್ತದೆ. ವಿದ್ವಾಂಸರು ಹೇಳುವ ಅರವತ್ನಾಲ್ಕು ಕಲೆಗಳಲ್ಲಿ ಗಮಕ ಕಲೆಯೂ ಒಂದು. ಸಾಹಿತ್ಯ ಕ್ಷೇತ್ರದಲ್ಲಿ ಕವಿ, ಗಮಕಿ, ವಾದಿ, ವಾಗ್ಮಿ ಎಂಬುದಾಗಿ ನಾಲ್ವರು ವಿದ್ವಾಂಸರನ್ನು ಗುರುತಿಸಿದ್ದಾರೆ. ಇಲ್ಲಿ ಗಮಕಿಯನ್ನು ಗುರುತಿಸಿದ್ದಾರೆ.

ಗಮಕಿಗೆ ತಾನು ವಾಚನ ಮಾಡುವ ಕಾವ್ಯದ ಬಗ್ಗೆ ಚೆನ್ನಾಗಿ ಅಧ್ಯಯನ ಮಾಡುವ ಪ್ರವೃತ್ತಿ ಇರಬೇಕು. ಗಮಕಿಯು ಕಾವ್ಯದಲ್ಲಿ ಬರುವ ವಿವಿಧ ಪದ್ಯಗಳ ಲಕ್ಷಣಗಳನ್ನು ಅರಿತಿರಬೇಕು. ಈ ಪದ್ಯಗಳಿಗೆ ರಸಗಳಿಗೆ ಯೋಗ್ಯವಾದ ರಾಗಗಳನ್ನು ಅಳವಡಿಸಿ ಗಾಯನ ಮಾಡಲು ಅಗತ್ಯವಾದ ಸಂಗೀತ ಜ್ಞಾನವನ್ನು ಹೊಂದಿರಬೇಕು. ಗಮಕವಾಚನ ಮಾಡುವಾಗ ಶ್ರುತಿಯ ಬಗ್ಗೆ ಸಂಪೂರ್ಣವಾದ ಗಮನ ಮತ್ತು ಅಗತ್ಯವಾದ ಜ್ಞಾನವಿರಬೇಕು.

ಎಂದಿಗೂ ಶ್ರುತಿಯನ್ನು ಬಿಟ್ಟು ವಾಚಿಸಬಾರದು. ಗಮಕ ಕಲೆಯ ಬಗ್ಗೆ ಅಧ್ಯಯನ ಅಗತ್ಯ. ಸಂಗೀತ ಶಿಕ್ಷಣ ಎರಡೂ ಗಮಕಿಗೆ ಅತ್ಯಗತ್ಯ ಎನ್ನುವುದನ್ನು ಮರೆಯಬಾರದು. ಕಾವ್ಯಗಾಯನ ಕಲೆಯಲ್ಲಿ ಸಾಹಿತ್ಯ ಸಂಗೀತವೆರಡೂ ಹಾಲು ಜೇನಿನಂತೆ ಬೆರೆತು ಕೇಳುಗರಲ್ಲಿ ಆನಂದದ ತನ್ಮಯತೆ ಉಂಟು ಮಾಡಬೇಕು. ಸ್ಪಷ್ಟವಾದ ಹಾಗೂ ಶುದ್ಧವಾದ ಸಾಹಿತ್ಯ ಉಚ್ಚಾರಣೆಯೊಂದಿಗೆ, ಸ್ವರಕ್ಕೆ ತಕ್ಕುದಾದ ಹಿತಮಿತವಾದ ರಾಗವನ್ನು ಸಂಯೋಜಿಸಿ ಕವಿಯ ಅಂತರಂಗದ ಭಾವವನ್ನು ಅರಿತು ಹಾಡುವುದರಿಂದ ಗಮಕ ವಾಚನ ಹೆಚ್ಚು ಅರ್ಥಪೂರ್ಣವಾಗುತ್ತದೆ.

**ವ್ಯಾಖ್ಯಾನ:** ಕಾವ್ಯವಾಚನದ ಜೊತೆ ಜೊತೆಯಲ್ಲಿಯೇ ವ್ಯಾಖ್ಯಾನ ಕಲೆಯೂ ಬೆಳೆದು ಬಂದಿದೆ. ಗಮಕಿಯು ವಾಚನ ಮಾಡುವ ಕಾವ್ಯಭಾಗದ ಪದ್ಯಗಳ ಅರ್ಥವನ್ನು ಶ್ರೋತೃಗಳಿಗೆ ಅರ್ಥಪೂರ್ಣವಾಗಿ ತಿಳಿಸುವವರೇ ವ್ಯಾಖ್ಯಾನಕಾರರು. ವಾಚನಕ್ಕೆ ಪೂರಕವಾಗಿ, ಪುಷ್ಟಿ ಕೊಡುವಂತೆ ವ್ಯಾಖ್ಯಾನವಿರಬೇಕು. ವಾಚನ-ವ್ಯಾಖ್ಯಾನಗಳೆರಡೂ ಸಮ್ಮಿಳಿತಗೊಂಡ ಅಪೂರ್ವಕಲೆ ಗಮಕ ಕಲೆ.

ಗಮಕಿ-ವ್ಯಾಖ್ಯಾನಕಾರರ ನಡುವೆ ಸಾಮರಸ್ಯವಿರಬೇಕಾದದ್ದು ಬಹಳ ಮುಖ್ಯ. ಗಮಕ ವಾಚನವೆಂದರೆ ಕಣ್ಣೆದುರಿಗೆ ಬರುವುದು ಕುಮಾರವ್ಯಾಸ ಭಾರತ, ಜೈಮಿನಿ ಭಾರತ, ತೊರವೆ ರಾಮಾಯಣ, ವಿಕ್ರಮಾರ್ಜುನ ವಿಜಯ ಮುಂತಾದ ಪ್ರಸಿದ್ಧ ಕಾವ್ಯಗಳು. ಎಲ್ಲೆಡೆ ವಾಚನ ಮಾಡುವ ಈ ಕಾವ್ಯಗಳೇ ಅಲ್ಲದೆ ಅಷ್ಟಾಗಿ ಜನರ ಗಮನಕ್ಕೆ ಬಾರದ ಹಲವಾರು ಉತ್ತಮ ಕಾವ್ಯಗಳು ಸಾಹಿತ್ಯಲೋಕದಲ್ಲಿ ಅಡಗಿವೆ. ಅವುಗಳನ್ನು ಗಮಕಿಗಳು ವಾಚನದ ಮೂಲಕ ಬೆಳಕಿಗೆ ತರಬೇಕಾಗಿದೆ.

ವಸಂತಾ ವೆಂಕಟೇಶ್, ಮೈಸೂರು





# ಬೆಂಗಳೂರಿನ ನಿರ್ಮಾತೃ ಕೆಂಪೇಗೌಡರು

ಪ್ರೊ. ಬಿ. ನಾರಾಯಣಮ್ಮ





ಶ್ರೀ ಮರಿಮಲ್ಲಯ್ಯ

ಗುರುಪತ್ನಿಯು ಹಾಗಾದರೆ ಕೇಳಿ, ಭಾರತ ದೇಶವನ್ನು ದೆಹಲಿಯ ಸುಲ್ತಾನರ ಸೈನ್ಯವು ಯುದ್ಧ ಮಾಡಿ ಛಿದ್ರ ಛಿದ್ರಗೊಳಿಸಿದೆ. ಇಂತಹ ಕಠಿಣ ಪರಿಸ್ಥಿತಿಯಲ್ಲಿ ವಿದ್ಯಾರಣ್ಯರು ಹಕ್ಕ-ಬುಕ್ಕರಿಗೆ ಎಲ್ಲಾ ರೀತಿಯ ಮಾರ್ಗದರ್ಶನ ನೀಡಿ, ವಿಜಯನಗರ ಸಾಮ್ರಾಜ್ಯವನ್ನು ಸ್ಥಾಪಿಸಿದರು. ಈಗ ಉಳಿದಿರುವ ಸಾಮ್ರಾಜ್ಯ ವಿಜಯನಗರವೊಂದೇ. ವಿಜಯನಗರ ಸಾಮ್ರಾಜ್ಯದ ವಿನಾಶಕ್ಕೆ ರಾಜ್ಯದೊಳಗಿನ ಹಿತಶತ್ರುಗಳು, ಸುಲ್ತಾನರು ಹೊಂಚು ಹಾಕುತ್ತಿದ್ದಾರೆ. ಆದುದರಿಂದ ನೀವು ವಿಜಯನಗರ ಸಾಮ್ರಾಜ್ಯವನ್ನು, ಸಾಮ್ರಾಟರನ್ನು ರಕ್ಷಿಸುವ ಹೊಣೆ ಹೊರಬೇಕು. ಅದಕ್ಕಾಗಿ ಕಂಕಣಬದ್ಧರಾಗಿ ನನಗೆ ವಚನ ಕೊಡಿ. ಇದೇ ನೀವು ನಮಗೆ ಕೊಡಬೇಕಾದ ಗುರುದಕ್ಷಿಣೆ ಎಂದು ಹೇಳಿದರು. ಗುರುಪತ್ನಿಯ ಮಾತನ್ನು ಕೇಳಿದ ಸಹೋದರರ ಮೈಯಲ್ಲಿ ಮಿಂಚಿನ ಸಂಚಾರವಾಯಿತು, ರೋಮಾಂಚನವಾಯಿತು.

ತಾಯಿ ನೀವು ಚಿನ್ನ, ವಜ್ರ, ವೈಢೂರ್ಯ ಅಗ್ರಹಾರಗಳನ್ನು ಕೇಳಬಹುದೆಂದು ಭಾವಿಸಿದ್ದೆ. ಆದರೆ ನೀವು ಅಪ್ರತಿಮ ದೇಶಭಕ್ತರು. ಮಹಿಳಾಕುಲಕ್ಕೇ ಹೊಂದಿರುವ ಮಹಾಮಾತೆ ನೀವು. ನೀವೊಂದು ಅನರ್ಘ್ಯ ರತ್ನ. ನಿಮ್ಮ ನರನಾಡಿಗಳಲ್ಲಿ ರಾಷ್ಟ್ರಾಭಿಮಾನ ತುಂಬಿ ತುಳುಕುತ್ತಿದೆ. ಗುರುದೇವರು ನೀಡಿದ ಜ್ಞಾನರತ್ನಗಳ ಮೇಲಾಣೆ. ನೀವು ಇಟ್ಟ ಅನ್ನದ ಮೇಲಾಣೆ. ನಮ್ಮ ಪೂಜ್ಯ ಮಾತಾಪಿತರ ಮೇಲಾಣೆ. ಸಮಸ್ತ ದೇವತೆಗಳ ಮೇಲಾಣೆ. ವಿಜಯನಗರ ಸಾಮ್ರಾಜ್ಯ ನಮ್ಮ ಅಭಿಮಾನದ ಸಂಕೇತ. ಅದರ ರಕ್ಷಣೆಗಾಗಿ ನಾವು ನಮ್ಮ ಪ್ರಾಣವನ್ನು ತ್ಯಾಗ ಮಾಡಲು, ಬಲಿದಾನ ಮಾಡಲು, ನೆತ್ತರು ಹರಿಸಲು ಸಿದ್ಧರಿದ್ದೇವೆ. ಇದೇ ನಮ್ಮ ಪ್ರತಿಜ್ಞೆ ಮಾಡಿದರು. ಕೆಂಪ ಸೋಮಣ್ಣನವರೂ ಅಂತೆಯೇ ಪ್ರತಿಜ್ಞೆ ಮಾಡಿದರು. ಗುರುಗಳಿಗೆ ಗುರುಪತ್ನಿಗೆ ಬಹಳ ಸಂತೋಷವಾಯಿತು. ಇವರಿಬ್ಬರನ್ನೂ ಆಶೀರ್ವದಿಸುತ್ತಾ ''ನಿಮ್ಮಂತಹ ದೇಶಭಕ್ತರನ್ನು ಪಡೆದ ಭರತಮಾತೆ ಧನ್ಯಳು. ನಿಮ್ಮಿಂದ ಮಹತ್ಕಾರ್ಯಗಳು ಸಿದ್ಧಿಸುತ್ತವೆ. ಸದಾಕಾಲ ಆದಿಶಕ್ತಿ ಕೆಂಪಾಂಬೆಯ ಅನುಗ್ರಹ ನಿಮ್ಮ ಮೇಲಿದೆ'' ಎಂದು ಹೇಳಿದರು. ಅವರಿಬ್ಬರೂ ಗುರುಗಳಿಗೆ, ಗುರುಪತ್ನಿಗೆ ನಮಸ್ಕರಿಸಿ ತಮ್ಮ ಊರಿಗೆ ಹಿಂದಿರುಗಿದರು.

ಕೆಂಪನಂಜೇಗೌಡರು, ರಾಜಕುಮಾರರು ಸಕಲ ವಿದ್ಯೆಗಳನ್ನು ಕಲಿತು ಬಂದ ಸಂತೋಷದಲ್ಲಿ ಎಲ್ಲಾ ದೇವಸ್ಥಾನಗಳಲ್ಲಿ ವಿಶೇಷ ಪೂಜೆಯನ್ನು ಏರ್ಪಡಿಸಿದರು. ಬಡವರಿಗೆ ಅನ್ನದಾನ ಮಾಡಿ ಬಟ್ಟೆಗಳನ್ನಿತ್ತರು. ಬ್ರಾಹ್ಮಣರಿಗೆ ಅಗ್ರಹಾರಗಳನ್ನು ನೀಡಿದರು. ಆವತಿಗೆ ಹೋಗಿ ತಮ್ಮ ಕುಲದೇವತೆಯ ಪೂಜೆ ಮಾಡಿದರು. ಕೆಂಪೇಗೌಡರು ತಮ್ಮ ರಾಜ್ಯದಲ್ಲೆಲ್ಲಾ ಸಂಚರಿಸಿ, ಯುವಕರಿಗೆ ಯುದ್ಧದ ತರಬೇತಿಯನ್ನು ನೀಡಿದರು. ಅವರ ಕಷ್ಟಸುಖಗಳಿಗೆ ಸ್ಪಂದಿಸಿ, ಅವರ ಕುಂದುಕೊರತೆಗಳನ್ನು ನಿವಾರಿಸಿದರು. ಯಲಹಂಕ ರಾಜ್ಯವು ವಿಜಯನಗರಕ್ಕೆ ದಕ್ಷಿಣದ ಕೋಟೆಯಾಗಬೇಕು ಎಂದು ಸಾಮ್ರಾಟರು ಹೇಳಿದ್ದ ಮಾತುಗಳನ್ನು ಗುರುಪತ್ನಿಯ ಮಾತುಗಳನ್ನು ಪದೇ ಪದೇ ನೆನಪು ಮಾಡಿಕೊಂಡು ಕಾರ್ಯತತ್ಪರರಾದರು.

ಕೆಂಪೇಗೌಡರು ಮತ್ತು ಕೆಂಪಸೋಮಣ್ಣನವರು ನಗರ ಸಂಚಾರ ಮಾಡುತ್ತಿರುವಾಗ ಒಂದು ಗುಡಿ ಕಾಣಿಸಿತು. ಒಳಗಿನಿಂದ ಜನರು ಮಾತನಾಡುವ ಶಬ್ದ ಕೇಳಿಸಿತು. ಗುಹೆಯ ಒಳಗಡೆ ಹೋಗಿ ನೋಡಿದಾಗ ಜಯವರ್ಧನನನ್ನು ಭರಮನಾಯಕನು ಹೆದರಿಸುತ್ತಿದ್ದನು. ''ಎಲವೋ ಜಯವರ್ಧನ, ಕೃಷ್ಣದೇವರಾಯನ ಅಂತ್ಯಕಾಲ ಸಮೀಪಿಸುತ್ತಿದೆ. ರಹಸ್ಯ ಪತ್ರಗಳು ಎಲ್ಲಿವೆಯೋ ತಿಳಿಸು. ಇಲ್ಲವಾದರೆ ನಿನ್ನನ್ನು ಈಗಲೇ ಯಮಪುರಿಗೆ ಅಟ್ಟುವೆ'' ಎಂದು ಭರಮನಾಯಕನು ಗರ್ಜಿಸುತ್ತಿದ್ದನು.

''ಸಾಮ್ರಾಜ್ಯ ದ್ರೋಹಿಯಾದ ನಿನಗೆ ನಾನು ಹೆದರುವುದಿಲ್ಲ. ಬಹಮನಿ ಸುಲ್ತಾನರ ಎಂಜಲಿಗೆ ಕೈಯೊಡ್ಡುವ ನಿನ್ನ ಗತಿ ಏನಾಗುವುದೆಂಬುದನ್ನು ನೀನು ಇಷ್ಟರಲ್ಲಿಯೇ ಅರಿಯುವೆ'' ಜಯವರ್ಧನ ಹೇಳಿದನು.

''ನೋಡಿದಿರಾ ಭರಮನಾಯಕರೆ, ಇವನ ಸೊಕ್ಕು ಎಷ್ಟಿದೆ?'' ಎಂದನು ಅಮೀರಖಾನ್.

''ಇವನಿಗೆ ಎಷ್ಟು ಹೇಳಿದರೂ ಇವನು ಹಠ ಬಿಡುತ್ತಿಲ್ಲ. ಇವನನ್ನು ಒಂದೇ ಏಟಿಗೆ ಮುಗಿಸಿಬಿಡುತ್ತೇನೆ'' ಎಂದು ಭರಮನಾಯಕನು ತನ್ನ ಕತ್ತಿಯನ್ನು ಮೇಲೆತ್ತಿದನು. ಕೂಡಲೇ ಕೆಂಪೇಗೌಡರು ಚಂಗನೆ ಹಾರಿ ಭರಮನಾಯಕನ ಕೈ ತಡೆದರು. ಕೆಂಪಸೋಮಣ್ಣನವರು ಅಮೀರಖಾನನಿಗೆ ಎದುರಾಗಿ ನಿಂತರು. ನಾಲ್ವರು ತೀವ್ರವಾಗಿ ಹೋರಾಡಿದರು. ಅಮೀರಖಾನನು ಹೋರಾಟದಲ್ಲಿ ಸತ್ತನು. ಭರಮನಾಯಕನು ಪಶ್ಚಾತ್ತಾಪ ಪಟ್ಟನು. ಕೆಂಪೇಗೌಡರು ಭರಮನಾಯಕನನ್ನು ಬಂಧಿಸಿ, ಜಯವರ್ಧನನೊಡನೆ ವಿಜಯನಗರಕ್ಕೆ ಬಂದರು. ಹೀಗೆ ವಿಜಯನಗರಕ್ಕೆ ಒದಗಿದ್ದ ಉಪಟಳವನ್ನು ನಿವಾರಿಸಿದರು.

ವಿಜಯನಗರದಲ್ಲಿ ವಿಜಯೋತ್ಸವದ ಅಂಗವಾಗಿ ನಡೆಯುತ್ತಿದ್ದ ಸ್ಪರ್ಧೆಗಳಲ್ಲಿ ಈ ಸಹೋದರರು ಭಾಗವಹಿಸಿ, ಬಹುಮಾನಗಳನ್ನು ಪಡೆದರು. ಜಯವರ್ಧನನಿಂದ ಇವರ ಧೈರ್ಯ ಸಾಹಸಗಳನ್ನು ತಿಳಿದ ವಿಜಯನಗರದ ಸಾಮ್ರಾಟ ಶ್ರೀಕೃಷ್ಣದೇವರಾಯರು ಇವರನ್ನು ಸನ್ಮಾನಿಸಿದರು. ಹೊಸದಾದ ನಗರವನ್ನು ನಿರ್ಮಿಸಲು ಅನುಮತಿಯನ್ನು ನೀಡಿದರು. ಭರಮನಾಯಕನನ್ನು ಸೆರೆಯಿಂದ ಬಿಡಿಸಲು ಇವರು ಕೇಳಿಕೊಂಡರು. ಶ್ರೀ ಕೃಷ್ಣದೇವರಾಯರು ಇವರ ಕೋರಿಕೆಯಂತೆ ಭರಮನಾಯಕನನ್ನು ಸೆರೆಯಿಂದ ಬಿಡಿಸಿದರು. ಗೂಢಚಾರರಿಂದ ತಮ್ಮ ಮಕ್ಕಳ ಸಾಹಸವನ್ನು ಕೇಳಿದ ಕೆಂಪನಂಜೇಗೌಡರು ಅತ್ಯಂತ ಸಂತೋಷಪಟ್ಟರು.

*(ಮುಂದುವರಿಯುವುದು)*





# ತಲಕಾಡಿನ ಗಂಗರು (ಕ್ರಿ.ಶ. 350-999)

## ಲಲಿತಕಲೆ

ನೃತ್ಯ, ಸಂಗೀತ ಮೊದಲಾದ ಲಲಿತಕಲೆಗಳಲ್ಲಿ ಅರಸುಮನೆತನದವರೇ ಅಲ್ಲದೆ ಸಾರ್ವಜನಿಕರೂ ಅಭ್ಯಸಿಸಬಹುದಿತ್ತು. ಅರಸರು ಹಾಗೂ ಮಹಾರಾಣಿಯರು ನೃತ್ಯಸಂಗೀತಗಳಿಗೆ ಪ್ರೋತ್ಸಾಹ ನೀಡಿದ್ದರು. ಸ್ತ್ರೀಪುರುಷರೂ ಸಮಾನರಾಗಿ ಅದರ ಅಭ್ಯಾಸ ಮಾಡುತ್ತಿದ್ದರು. ಗಂಗರಾಜ್ಯದ ಪ್ರಮುಖ ನರ್ತಕಿ ಬಾಚಲದೇವಿ 'ನೃತ್ಯವಿಶಾರದೆ'ಯಾಗಿದ್ದಳಂತೆ. ಅವಳ ನೃತ್ಯದ ಚಾಕಚಕ್ಯತೆಗೆ ಮಾರುಹೋಗಿದ್ದ ಅರಸ ಅವಳಿಗೆ 'ಪಾತ್ರ ಜಗದವಳೆ' ಎಂಬ ಬಿರುದು ಕೊಟ್ಟ ಸಂಗತಿಯನ್ನು ಶಾಸನದಲ್ಲಿ ಹೇಳಿಕೊಳ್ಳಲಾಗಿದೆ.

## ಕಲೆ ಮತ್ತು ವಾಸ್ತುಶಿಲ್ಪ

ಕಲೆ ಮತ್ತು ವಾಸ್ತುಶಿಲ್ಪ ದೃಷ್ಟಿಯಿಂದಲೂ ಗಂಗರ ಕಾಲ ಪ್ರಮುಖವಾಗಿದೆ. ಗಂಗ ಅರಸರು ವಿದ್ಯಾಭಿಮಾನಿಗಳಾಗಿದ್ದಷ್ಟೇ ಕಲಾಭಿಮಾನಿಗಳೂ ಆಗಿದ್ದರು. ಗಂಗವಾಡಿ ಅವರ ಕಲೆ ಮತ್ತು ವಾಸ್ತುಶಇಲ್ಪ ಚಟುವಟಿಕೆಗಳ ಮುಖ್ಯ ಕೇಂದ್ರ. ಅವರು ನಿರ್ಮಿಸಿದ ದೇವಾಲಯಗಳು, ಚೈತ್ಯಾಲಯಗಳಲು, ಬಸದಿಗಳು ಅನೇಕ ಕಡೆ ಕಂಡುಬಂದಿವೆ. ಪಲ್ಲವರ (ದ್ರಾವಿಡಶೈಲಿ) ಶೈಲಿಯಲ್ಲಿ ಶಿವ, ವಿಷ್ಣು ದೇವಾಲಯಗಳನ್ನು ನಿರ್ಮಿಸಿದ್ದಾರೆ. ಮನ್ನೆಯ ಕಪಿಲೇಶ್ವರ ದೇವಾಲಯ, ವರುಣದಲ್ಲಿನ ಮಹಲಿಂಗೇಶ್ವರ ದೇವಾಲಯ, ತಲಕಾಡಿನ ಮರುಳೇಶ್ವರ ಮತ್ತು ಪಾತಾಳೇಶ್ವರ ದೇವಾಲಯಗಳು, ಕೋಲಾರದ ಕೋಲಾರಮ್ಮನ ದೇವಾಲಯ ಮತ್ತು ಬೇಗೂರಿನ ನಗರೇಶ್ವರ ದೇವಾಲಯ, ನಂದಿಯಲ್ಲಿರುವ ಭೋಗನಂದೀಶ್ವರ, ನರಸಮಂಗಲದ ವಿಷ್ಣು, ಶಇವ ದೇವಾಲಯಗಳು ಪ್ರಮುಖವಾಗಿವೆ. ವಾಸ್ತುಶಿಲ್ಪ ದೃಷ್ಟಿಯಿಂದ ಶ್ರವಣಬೆಳಗೊಳದಲ್ಲಿನ ತೀರ್ಥಂಕರಮೂರ್ತಿಗಳು ಉತ್ತಮವಾದುವಾಗಿವೆ. ಅಲ್ಲಿನ 'ಮಾನಸ್ತಂಭ', 'ಬ್ರಹ್ಮದೇವರ ಸ್ತಂಭ' ಗಂಗರ ಕಾಲದಲ್ಲಿ ಸ್ಥಾಪಿಸಲ್ಪಟ್ಟವು. ಈ ಕಾಲದಲ್ಲಿ ಸರಸ್ವತಿ, ಲಕ್ಷ್ಮಿ, ವಿಷ್ಣು, ಬುದ್ಧ, ಮಹಾವೀರ, ಯಕ್ಷ ಹಾಗೂ ಯಕ್ಷಿಯರ ವಿಗ್ರಹಗಳು ಅಧಿಕ ಸಂಖ್ಯೆಯಲ್ಲಿ ನಿರ್ಮಿತವಾಗಿವೆ. ಚಾವುಂಡರಾಯನ ಅಪೂರ್ವ ಕಲಾಸಾಧನೆಯೆಂದರೆ ಶ್ರವಣಬೆಳಗೊಳದಲ್ಲಿ ಕೆತ್ತಿಸಿರುವ 58.8 ಅಡಿ ಎತ್ತರದ ಏಕಶಿಲಾ ಗೊಮ್ಮಟ ವಿಗ್ರಹ. ನಿಂತ ಭಂಗಿಯಲ್ಲಿರುವ ಈ ವಿಗ್ರಹ ಪ್ರಪಂಚದಲ್ಲೇ ಅದ್ವಿತೀಯವಾದುದಾಗಿದೆ. ಇದರ ನಿರ್ಮಾಣ ಕಾರ್ಯದಲ್ಲಿ ಅನೇಕ ಶಇಲ್ಪಿಗಳು ಶ್ರಮಿಸಿದ್ದರು. ಅರಿಷ್ಟನೇಮಿ ಮೇಲ್ವಿಚಾರಣೆ ವಹಿಸಿದ್ದನು.

*(ಮುಗಿಯಿತು)*

ಯಜಮಾನಿ: ಇವತ್ತು ನೀನು ಚಪಾತಿಗೆ ತುಪ್ಪ ಜಾಸ್ತಿ ಹಾಕಿರುವೆ.

ಅಡುಗೆಯವಳು: ನಾನು ನನ್ನ ಚಪಾತಿಯನ್ನು ಕಣ್ತಪ್ಪಿ ನಿಮಗೆ ಈ ದಿವಸ ಕೊಟ್ಟಿದ್ದೇನೆ. ಪ್ಲೀಸ್ ತಪ್ಪಾಯ್ತು ಅಮ್ಮಾವ್ರೆ.

# ನಿಮ್ಮ ಪ್ರಶ್ನೆಗೆ ನಮ್ಮ ಉತ್ತರ

**ಸುಧಾ, ಬೆಂಗಳೂರು**

*ಹೆಣ್ಣು ಮದುವೆ ಮಾಡಿಕೊಳ್ಳುವ ಮೊದಲು ಯಾವ ವಿಷಯಕ್ಕೆ ಗಮನ ಕೊಡಬೇಕು?*

–ಹೋದ ಮನೆಯಲ್ಲಿ ಅನುಸರಿಸಬೇಕಾದ ಡ್ರೆಸ್ಸು ಹಾಗೂ ಅಡ್ರೆಸ್ಸು?

**ಆರತಿ, ಮುಂಬೈ**

*ತ್ರಿಲೋಕ ಸಂಚಾರಿಯಾದ ನಾರದರಿಗೆ ಯಾವ ಲೋಕದಲ್ಲೂ ಸೂಕ್ತ ಕನ್ಯೆ ಸಿಗಲಿಲ್ಲವೆ?*

–ತುಂಬಾ ಚೆಲುವೆಯರೇನೋ ಸಿಕ್ಕರು. ಆದರೆ ಪರ್ಮನೆಂಟ್ ಟೂರಿಂಗ್ ಜಾಬ್ ಆದ್ದರಿಂದ ಒಪ್ಪಿಕೊಳ್ಳಲಿಲ್ಲವಂತೆ.

**ಮುಕುಂದ, ಶಿವಮೊಗ್ಗ**

*ಗಂಡಸರು ಗೊರಕೆ ಹೊಡೆದರೆ ಹೊರಕ್ಕೆ. ಹೆಂಗಸರು ಗೊರಕೆ ಹೊಡೆದರೆ?*

–ವ್ಯತ್ಯಾಸವೇನೂ ಇಲ್ಲ. ಆಗಲೂ ಗಂಡಸೇ ಹೊರಕ್ಕೆ.

**ಲಕ್ಷ್ಮಿ, ಕೋಲಾರ**

*ಗುರುವಿನಸ ಹಾಯವಿಲ್ಲದೆ ಎಲ್ಲರೂ ಸುಲಭವಾಗಿ ಕಲಿಯುವ ವಿದ್ಯೆ ಇದೆಯೇ?*

–ಇದೆ. ಹೆಣ್ಣಿಗೆ ಕನ್ನಡಿ ನೋಡುವುದು. ಗಂಡಿಗೆ ಹೆಣ್ಣನ್ನು ನೋಡುವುದು.

**ಸುಮತಿ, ಬಳ್ಳಾರಿ**

*ಪತಿಯನ್ನು ಗಂಡ ಎಂದು ಕರೆಯುವುದು ಏಕೆ?*

–ಏಕೆಂದರೆ ಗಂಡು ಕೊಂಬು ಕಳೆದುಕೊಂಡರೆ ಆಗುವುದೇ ಗಂಡ!

**ನಳಿನಾಕ್ಷಿ, ಶಿವಮೊಗ್ಗ**

*ನಮ್ಮ ಬದುಕು ಸುಂದರವಾಗುವುದು ಯಾವಾಗ?*

–ಹೊಂದಾಣಿಕೆ ಎಂಬ ಮೇಕಪ್ ಧರಿಸಿದಾಗ ಮಾತ್ರ.

**ಭಾಸ್ಕರ, ತುಮಕೂರು**

*ನದಿಗಳಿಗೆ ಹೆಣ್ಣಿನ ಹೆಸರು. ಬೆಟ್ಟಗಳಿಗೇಕೆ ಗಂಡಸರ ಹೆಸರು?*

–ನದಿ ತವರಿನಿಂದ ಬೇರೆಡೆಗೆ ಸಾಗುವ ಹೆಣ್ಣು. ಬೆಟ್ಟ ಇದ್ದಲ್ಲೇ ಬಿದ್ದಿರುವ ಗಂಡು.

**ಚಂದ್ರಿಕಾ, ಮಂಗಳೂರು**

*ಕೆಲಸಕ್ಕೆ ಹೋಗುವ ತಾಯಿ ಒಳ್ಳೆಯ ತಾಯಿ ಆಗಲು ಸಾಧ್ಯವಿಲ್ಲವೇ?*

–ಮನೆಯವರ ನಡೆ, ನುಡಿಗಳಲ್ಲಿ ಖಾರ ಇದ್ದರೆ ಸಾಧ್ಯವಿಲ್ಲ. ಸಹಕಾರ ಇದ್ದರೆ ಸಾಧ್ಯ.

**ಸುಗಂಧಿನಿ, ಚೆನ್ನೈ**

*ಕರುಣೆ, ಪ್ರೀತಿ, ಸಹನೆ ತುಂಬಾ ಇರುವುದು ಹೆಂಗಸರಲ್ಲೋ ಅಥವಾ ಪುರುಷರಲ್ಲೋ?*

–ಇದು ಕರುಳಿಗೆ ಸಂಬಂಧಿಸಿದ್ದು. ಹೆಂಗರುಳು ಇದ್ದಲ್ಲಿ ಮಾತ್ರ ಇವುಗಳಿಗೆ ಜಾಗ ಅಷ್ಟೆ.

**ಮುರುಗೇಶ್, ರಾಯಚೂರು**

*ಹೆಣ್ಣಿನ ಕುಡಿನೋಟಕ್ಕೆ ಗಂಡುಗಳು ದಾಸರಾಗುತ್ತಾರೆ. ಗಂಡುಗಳ ಯಾವ ನೋಟಕ್ಕೆ ಹೆಣ್ಣು ದಾಸಳಾಗುತ್ತಾಳೆ?*

–ಅದು ಕುಡಿನೋಟವಲ್ಲ, ಕೊಡಿಟ್ಟ ನೋಟುಗಳಿಗೆ ಆಕರ್ಷಿತರಾಗುತ್ತಾರೆ.

**ಸ್ವಾಮಿ, ಹಾಸನ**

*ತಾಳಕ್ಕೆ ತಕ್ಕಂತೆ ಕುಣಿಯುವವರು ಯಾರು?*

–ಕುಣಿಯುವ ಜೋಷ್ ಇರುವವರು ಹಾಗೂ ಹೆಂಡತಿ ಬಾಯಲ್ಲಿ ಭೇಷ್ ಅನ್ನಿಸಿಕೊಳ್ಳೋ ಗಂಡಂದಿರು.

**ರಮೇಶ್, ಮೈಸೂರು**

*ಹುಡುಗಿ ಬೆರಳು ಸೋಕಿದರೆ ವಿದ್ಯುತ್ ಸಂಚರಿಸಿದಂತಾಯಿತಲ್ಲ?*

–ಜೋಪಾನ ಬೆರಳ ತುದೀಲಿದ್ರೆ ಒಳ್ಳೇದು, ಕೈ ಹಿಡುದ್ರೆ ಪೂರಾ ಫ್ಯೂಸ್ ಹೋಗಿ ಮರಗಟ್ಟಿ ಹೋಗುತ್ತೆ.



# ಯಮಲೋಕದಲ್ಲಿ ಪತ್ರಕರ್ತ



(ಹಿಂದಿನ ಸಂಚಿಕೆಯಿಂದ)

ನಾರದ: ಬ್ರಹ್ಮದೇವ, ಇದು ದೈವರಹಸ್ಯ. ಇದನ್ನು ತಿದ್ದಲು ತ್ರಿಮೂರ್ತಿಗಳಿಂದಲೂ ಸಾಧ್ಯವಿಲ್ಲ. ಪ್ರಭುವೇ ಮೊದಲು ಚಿತ್ರಗುಪ್ತರನ್ನು ಹುಡುಕಿಸಿ. ನಂತರ ಯೋಚಿಸೋಣ ಎಂದು ಬ್ರಹ್ಮದೇವರಿಗೆ ಟಾಟಾ ಮಾಡಿ ಹೊರಟೇಬಿಟ್ಟ.

ಬ್ರಹ್ಮ: ಯಮರಾಜ ಹೋಗಿ ಬಾ, ಕಾಲ ಕೂಡಿಬಂದಾಗ ಅದೇ ಸರಿಯಾಗುತ್ತದೆ.

ಯಮ: ನಡೆದುಕೊಂಡು ಯಮಪುರಿತ್ತ ಹೆಜ್ಜೆ ಹಾಕಿದ. ನಡೆದುಕೊಂಡು ಬರ್‍ತಾ ಬರ್‍ತಾ ಅಕಸ್ಮಾತ್ ಇಂದ್ರಲೋಕ ಪ್ರವೇಶಿಸಿಬಿಟ್ಟ. ಇಂದ್ರನ ಅರಮನೆಯಲ್ಲಿ ಸಖಿಯರು ಏನೋ, ಯಾರೋ ನೀನು, ರಂಭೆ, ಊರ್ವಶಿ, ಮೇನಕೆ ಹಾಗೂ ತಿಲೋತ್ತಮೆ ಮತ್ತು ಸುಂದರ ತರುಣಿಯರಿಂದ ಕೂಡಿರುವ ಇಂದ್ರನ ಆಸ್ಥಾನ ರಾಜನಿರುವ ಸ್ವರ್ಗಲೋಕವನ್ನು ಪ್ರವೇಶಿಸಲು ಎಷ್ಟೋ ಕೊಬ್ಬು. ನಡಿ ನಮ್ಮ ಮಹಾರಾಜರ ಬಳಿ ಎಂದು ಸಖಿಯರು ಯಮನನ್ನು ದರದರನೆ ಎಳೆದುಕೊಂಡು ಹೋದರು. ಇಂದ್ರ ಸಖಿಯರು ಪ್ರಭು ಪ್ರಭು ಎಂದು ಚೀರಿದರು.

ಇಂದ್ರ: ತನ್ನ ಮಡದಿಯೊಡನೆ ಸಂತಸದಿಂದ ಕೂಡಿದ್ದ. ಕರೆಯಿಂದ ಹೊರಬಂದು ಸಖಿಯರೇ ಏನು ಸಮಾಚಾರ?

ಸಖಿಯರು: ಪ್ರಭು, ನಮ್ಮ ಸ್ವರ್ಗಲೋಕಕ್ಕೆ ಒಬ್ಬ ಭಯಂಕರ ಮನುಷ್ಯ ನೋಡುವುದಕ್ಕೆ ಯಮನಂತೆ ಕಂಡರೂ, ಅವನು ಯಮನಲ್ಲ. ಅಕ್ರಮವಾಗಿ ಪ್ರವೇಶಿಸಿದ್ದಾನೆ. ಅವನ ಮೈಮೇಲೆ ವಸ್ತ್ರಗಳು ಅರ್ಧ ಮಾತ್ರ ಇದೆ. ಉಳಿದ ಜಾಗದಲ್ಲಿ ವಸ್ತ್ರವಿಲ್ಲ.

ಇಂದ್ರ: ಅವನನ್ನು ಸಂಹರಿಸಲು ವಜ್ರಖಡ್ಗ ಹಿಡಿದು ನಡೆದ. ಹೊರಗೆ ಬಂದಿದ್ದೇ ತಡ ನಗುತ್ತಾ ನಿಂತ. ಏನಯ್ಯಾ  ಯಮ, ನಿನ್ನ ಅವಸ್ಥೆ? ರಾಕ್ಷಸರು ನಮ್ಮ ಮೇಲೆ ದಾಳಿ ಮಾಡಲು ಬಂದರೆಂದು ವಜ್ರಖಡ್ಗ ತಂದೆ. ಪರವಾಗಿಲ್ಲ. ಒಳಗೆ ಬಾ ಎಂದು ಕರೆದ. ಯಮರಾಜ ಏಕೆ ಹೀಗೆ ಬೆತ್ತಲಾಗಿದ್ದೀರಿ, ಕಾರಣವೇನು?

ಯಮ: ಇಂದ್ರ, ಬ್ರಹ್ಮಲೋಕಕ್ಕೆ ಹೊರಟೆ. ದಾರಿಯಲ್ಲಿ ನನ್ನ ಎಮ್ಮೆ ಮಾಯವಾಗಿದೆ. ಎಮ್ಮೆಯನ್ನು ಹುಡುಕಿಕೊಂಡು ಹೀಗೆ ಬಂದೆ ಎಂದ.

ಇಂದ್ರ: ಹೇಗಿದ್ದರೂ ಬಂದಿದ್ದೀಯ. ಸ್ವಲ್ಪ ಸುರಾಪಾನ ಮಾಡು ಎಂದು ಯಮ–ಇಂದ್ರ ಇಬ್ಬರೂ ಸುರಾಪಾನ ಮಾಡಿದರು. ಜೊತೆಗೆ ನೃತ್ಯವೂ ನಡೆಯಿತು.

ಪತ್ರಕರ್ತ ರಾಮಸಿಂಹಯ್ಯ: ಮಾರುವೇಷದಿಂದ ಅರಮನೆ ಪ್ರವೇಶಿಸಿ ಇಂದ್ರ–ಯಮ ಸುರಾಪಾನದಿಂದ ಇರುವುದನ್ನು ನೋಡಿ ಸುರಾಪಾನಕ್ಕೆ ರಂ ಬೆರೆಸಿದ. ಸುರಾಪಾನ ನಿಮಿತ್ತ ಇಂದ್ರ ಸೇವಕರನ್ನು ಕರೆದು ಮತ್ತೆ ಸುರಾಪಾನ ತರುವಂತೆ ಆಜ್ಞಾಪಿಸಿದ. ಮಾರುವೇಷದ ರಾಮಸಿಂಹಯ್ಯ ರಂನ್ನು ಇಬ್ಬರಿಗೂ ಕೊಟ್ಟನು. ರಾಮಸಿಂಹಯ್ಯ ತಮಗೆ ಬೇಕಾದ ಚಿತ್ರವನ್ನು ತೆಗೆದರು.

ಯಮ: ಇಂದ್ರ, ಹೋಗಿಬರಲೇ. ರಮ್ಮಿನ ಆಟ ಇಬ್ಬರಿಗೂ ಟಾಟಾ ಇಂದ್ರ, ಹೋಗಿ ಬನ್ನಿ ಟಾಟಾ ಟಾಟಾ.

ಯಮ: ಮಧುಪಾನದಿಂದ ಬಿದ್ದಿದ್ದ... ಯಮನ ಎಮ್ಮೆ ಹುಲ್ಲನ್ನು ತಿಂದು ಯಮನ ಪಕ್ಕದಲ್ಲೇ ಬಿದ್ದಿತ್ತು.

ಚಿತ್ರಗುಪ್ತರು: ಹೋಟೆಲ್ಲಿನಲ್ಲಿ ರೂಂ ಮಾಡಿಕೊಂಡಿದ್ದರು. ಹೋಟೆಲ್ಲಿನ ಮ್ಯಾನೇಜರ್ ನಾರಾಯಣನನ್ನು ಕರೆದು ನಾನು ಮುಖ್ಯವಾಗಿರುವ ಕೆಲಸದ ಮೇಲೆ ಇಲ್ಲಿಗೆ ಬಂದಿದ್ದೇನೆ. ನನಗೆ ನಿಮ್ಮ ಸಹಾಯ ಬೇಕು. ಕೆಲವು ಆಸ್ಪತ್ರೆಗಳನ್ನು ಹುಡುಕಿಕೊಂಡು ಚಿತ್ರಗುಪ್ತರು ಹೊರಟರು. ಅಕಸ್ಮಾತ್ ಆಗಿ ದೊಡ್ಡಾಸ್ಪತ್ರೆಗೆ ಭೇಟಿ ನೀಡಿದರು. ಎಲ್ಲಾ ವಾರ್ಡುಗಳನ್ನು ವೀಕ್ಷಿಸುತ್ತಾ ಕೊನೆಗೆ ವಾರ್ಡ್ ನಂಬರ್ 9 ಬೆಡ್ ನಂಬರ್ 9ರಲ್ಲಿ ರಾಮಸಿಂಹಯ್ಯನ ದೇಹವನ್ನು ಕಂಡರು. ಮತ್ತೆ ನಾರಾಯಣನ್ನ ಜೊತೆಯಲ್ಲಿ ಕರೆತರಲು ಬ್ಯಾಕ್ ಟು ದಿ ಪೆವಿಲಿಯನ್ ಮತ್ತೆ ಹೋಟೆಲ್‌ಗೆ ಹೋದರು.

ಡಾಕ್ಟರ್ ಕೃಷ್ಣ: ರಾಮಸಿಂಹಯ್ಯನನ್ನು ನೋಡಲು ಅವರ ಆರೋಗ್ಯವನ್ನು ಸರಿಪಡಿಸಲು ಮೇಲಿನ ಅಧಿಕಾರಿಗಳು ಕೃಷ್ಣನನ್ನು ನೇಮಿಸಿದ್ದರು.

ರಾಮಶಾಸ್ತ್ರಿ: ಡಾಕ್ಟರ್ ಕೃಷ್ಣ, ನಮ್ಮ ಹುಡುಗನ ಸ್ಥಿತಿ ಹೇಗಿದೆ? ಮೊದಲಿನಂತೆ ಆರೋಗ್ಯವಂತನಾಗಿರುತ್ತಾನಾ? ಇಲ್ಲಿಯ ತನಕ ಎಲ್ಲಾ ವೈದ್ಯರು ಬರೀ ಭರವಸೆಗಳನ್ನು ನೀಡಿ ಸಮಾಧಾನ ಪಡಿಸುತ್ತಿದ್ದಾರೆ. ನನಗೇಕೋ ಮನಸ್ಸು ಚಂಚಲವಾಗುತ್ತಿದೆ ಡಾಕ್ಟ್ರೇ.

ಚಿತ್ರಗುಪ್ತ: ಅವಸರ ಅವಸರವಾಗಿ ತಾವು ಇಳಿದುಕೊಂಡಿದ್ದ ಸುಕನ್ಯಾ ಲಾಡ್ಜ್‌ಗೆ ಬಂದರು. ಬಂದವರೇ ಕೋಣೆಯ ಬಾಗಿಲನ್ನು ತೆಗೆದು ತಮ್ಮ ರತ್ನಗಂಬಳಿಯ ಮೇಲೆ ಹಾಗೆಯೇ ಒರಗಿಕೊಂಡರು.

ನಾರಾಯಣ: ಚಿತ್ರಗುಪ್ತರು ಸ್ಪೀಡಾಗಿ ಬಂದಿದ್ದನ್ನು ನೋಡಿ ಇವರು ಆತ್ಮಹತ್ಯೆ ಮಾಡಿಕೊಳ್ಳುವ ಸೂಚನೆಯನ್ನು ತೋರಿಸುತ್ತಿತ್ತು. ತಾವೂ ಸಹ ಚಿತ್ರಗುಪ್ತರನ್ನು ರಕ್ಷಿಸಲು ಶರವೇಗದಲ್ಲಿ ರೂಮನ್ನು ಸೇರಿದರು. ಚಿತ್ರಗುಪ್ತರೇ ಆತ್ಮಹತ್ಯೆ ಮಾಡಿಕೊಳ್ಳಬೇಡಿ. ಏನಾದರೂ ವಿಷಯವಿದ್ರೆ ಚಿಂತಿಸಿ ಸೂಕ್ತ ಕ್ರಮ ಕೈಗೊಳ್ಳೋಣ. ನಮ್ಮ ಹೋಟೆಲ್‌ನಲ್ಲಿ ಏನಾದರೂ ತೊಂದರೆಯಾಯಿತೇ?

ಚಿತ್ರಗುಪ್ತ: ಛೇ ಛೇ ಹಾಗೇನಿಲ್ಲ...

ನಾರಾಯಣ: ಹಾಗಾದರೆ ಏತಕ್ಕೆ ಅವಸರವಾಗಿ ಬಂದಿರಿ?

ಚಿತ್ರಗುಪ್ತ: ನಾರಾಯಣ ನಾನೊಂದು ಮುಖ್ಯವಾದ ವಿಷಯಕ್ಕೆ ಬಂದಿದ್ದೇನೆ. ನನ್ನ ಜೊತೆಗೆ ನೀವೂ ಬರ್ಬೇಕು. ಜೊತೆಗೆ ಒಂದು ವಾಹನವೂ ಸಹ ಬೇಕು. ಈ ರಥವನ್ನು ಸಿದ್ಧಪಡಿಸುವವರಾಗಿ.

ನಾರಾಯಣ: ತಮಗೆ ತಿಳಿದ ಒಳ್ಳೆಯ ಡ್ರೈವರನ್ನು ಹುಡುಕಿಟ್ಟುಕೊಂಡ. ಆ ಡ್ರೈವರ್‌ನ ಹೆಸರು ರಾಮಸ್ವಾಮಿ. ತಕ್ಷಣ ರಾಮಸ್ವಾಮಿಗೆ ದೂರವಾಣಿ ಕರೆ ಮಾಡಿದ.

*(ಮುಂದುವರೆಯುವುದು)*



# ಮರದ ಪೊಟರೆಯೊಳಗೆ ನವರತ್ನ ಕಾಂತಿ!

ಹಲವಾರು ವರ್ಷಗಳಿಂದ ನೆಲಕ್ಕೆ ಬಿದ್ದು, ಮಳೆ-ಮಾರುತಗಳ ಹೊಡೆತಕ್ಕೆ ಕೊಳೆತು ಹೋದ ಮರ. ಯಾರೂ ಹಾಯ್ದು ಹೋಗಿಲ್ಲದ ದಟ್ಟ ಕಾಡಿನಲ್ಲಿ ಬಿದ್ದದ್ದು. ಅಕಸ್ಮಾತ್ ಮನುಷ್ಯರ ಕಣ್ಣಿಗೆ ಬಿದ್ದರೂ ಗಮನಾರ್ಹವಲ್ಲದ್ದು. ಹೆಚ್ಚೆಂದರೆ ಹುಡುಗರಿಗೆ ಆಟದ ವಸ್ತುವಾಗಿ ಕಾಣುವಂಥದು. ಹುಡುಗರು ತಮಾಷೆಗೆಂದು ಅದರ ತೊಗಟೆಯನ್ನು ತೆಗೆಯ ಹೋದರೆ ನಾರಿನಂತೆ ಜುಪ್ಪಲು ಜುಪ್ಪಲಾಗಿ ಕಿತ್ತಿ ಬರುತ್ತದೆ. ಹುಡುಗರು ಹಾಗೇ ಮಾಡಿದರು. ಇದ್ದಕ್ಕಿದ್ದ ಹಾಗೆ ಅದರಲ್ಲಿ ಪೊಟರು ಕಾಣಿಸಿತು. ಒಳಗಡೆ ಕತ್ತಲೋ ಕತ್ತಲು. ಆದರೆ ಆ ಕತ್ತಲೆಯಲ್ಲಿ ಹಳದಿ, ಹಸಿರು, ನೀಲಿ, ಊದಾ, ಕೆಂಪು ಮೊದಲಾದ ನವರತ್ನಗಳ ಬಣ್ಣಗಳಲ್ಲಿ ಪ್ರಜ್ವಲಿಸುವ ಬೆಳಕಿನ ಚುಕ್ಕಿಗಳು! ಏನವು? ವಜ್ರಗಳೇ? ಮರದ ಒಳಗಡೆ ವಜ್ರಗಳನ್ನಿಟ್ಟು ಚೇಷ್ಟೆ ಮಾಡುವ ಪಿಶಾಚಿಗಳ ಕುಚೋದ್ಯವೆ?

ಪ್ರಕೃತಿಯ ನಿಗೂಢಗಳಲ್ಲಿ ಇದೂ ಒಂದು. ಪ್ರಕೃತಿಯ ಮಡಿಲಲ್ಲಿ ಯಾವ ಯಾವ ಸ್ಥಳಗಳಲ್ಲೋ ಏನೇನೋ ಬೆಳೆಯುತ್ತಾ ಇರುತ್ತವೆ. ಒಂದೊಂದಕ್ಕೆ ಬೇರೆ ಯಾವುದಕ್ಕೂ ಇಲ್ಲದ ವಿಶಿಷ್ಟ ಗುಣಗಳಿರುತ್ತವೆ. ಇಂಥ ವಿಶಿಷ್ಟ ಗುಣಗಳಿರುವಂಥವು ಕಣ್ಣಿಗೆ ಬೀಳುವುದು ಅಪರೂಪ.

ಮೇಲೆ ವಿವರಿಸಲಾದ ಕೊಳೆತ ಮರದ ಪೊಟರೆಯೊಳಗೆ ಇದ್ದವುಗಳು ವಜ್ರಗಳಲ್ಲ. ಭೂತಚೇಷ್ಟೆಯೂ ಅಲ್ಲ. ಅವು ಅಪರೂಪವಾದ ಒಂದು ಜಾತಿಗೆ ಸೇರಿದ ಅಣಬೆಗಳು. ಈ ಜಾತಿಯ ಅಣಬೆ ಬೆಳೆಯುವುದು ಕತ್ತಲೆಯಲ್ಲಿಯೆ, ಕೊಳೆತು ನಾರುವ ತಳದ ಮೇಲೆ, ಗಾಳಿಯಾಡದ ವಾತಾವರಣದಲ್ಲಿ. ಇದಕ್ಕೆ ಕತ್ತಲಲ್ಲಿ ಬಣ್ಣ ಬಣ್ಣಗಳಸ್ವಯಂಪ್ರಕಾಶವನ್ನು ಚೆಲ್ಲುವ ಶಕ್ತಿ ಇರುತ್ತದೆ. ಎಳೆತನದಲ್ಲಿ ಹಳದಿ, ಬರಬರುತ್ತ ಹಸುರು, ವಯಸ್ಸಾದಾಗ ನೀಲಿ, ಊದಾ.

ಈ ಅದ್ಭುತವಾದ ದೃಶ್ಯವನ್ನು ಕಂಡ ಅದೃಷ್ಟವಂತರು, ದಿವಂಗತ ಪ್ರೊ. ಬಿ.ಜಿ.ಎಲ್. ಸ್ವಾಮಿ ಮತ್ತು ಅವರೊಡನೆ ಸಸ್ಯ ಸಂಗ್ರಹಣೆಗಾಗಿ ಕಾಡಿಗೆ ಹೋಗಿದ್ದ ಸಸ್ಯಶಾಸ್ತ್ರದ ವಿದ್ಯಾರ್ಥಿಗಳು. ಬಿ.ಜಿ.ಎಲ್. ಸ್ವಾಮಿ ಅವರು ಮದರಾಸು ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ಮತ್ತು ಪ್ರಿನ್ಸಿಪಾಲರಾಗಿ ಸೇವೆ ಸಲ್ಲಿಸಿದ್ದಾರೆ. ಅವರು ವಿದ್ಯಾರ್ಥಿಗಳ ಜತೆ ಈಗಿನ ಕೇರಳದ ತೇಕ್ಕಡಿ ಅರಣ್ಯಕ್ಕೆ ಮಾಡಿದ್ದ ಪ್ರವಾಸದ ಕಥನವನ್ನು ತಮ್ಮ ಹಸುರು ಹೊನ್ನು ಕೃತಿಯಲ್ಲಿ ತುಂಬ ಸ್ವಾರಸ್ಯಕರವಾಗಿ ಬರೆದಿದ್ದಾರೆ.

ಮರದ ಪೊಟರೆಯೊಳಗೆ ನವರತ್ನಕಾಂತಿ ಸದೃಶವಾದ ಅಂಥ ಬೆಳಕನ್ನು ತಾವು ಕಂಡದ್ದು ಅದೇ ಮೊದಲು ಎಂದು ಸ್ವತಃ ಸಸ್ಯಶಾಸ್ತ್ರಜ್ಞರಾದ ಅವರೇ ಹೇಳಿದ್ದಾರೆ.

ಬೆಳೆಯುತ್ತಿರುವ ಜಾಗದಿಂದ ಬೇರ್ಪಡಿಸಿದರೆ ಅವುಗಳ ಸೊಬಗು ಮಾಯವಾಗಿ ಬಿಡುತ್ತದೆ. ಬೇರೆ ಕಡೆಗೆ ಒಯ್ದು ಬೆಳೆಸುವಂತೆಯೂ ಇಲ್ಲ. ಲ್ಯಾಬೊರೇಟರಿಯಲ್ಲಿ ಒಣಗಿಸಿಯೋ ದ್ರಾವಕದಲ್ಲಿಟ್ಟೋ ಕಾಪಾಡಬಹುದು. ಹಾಗೆ ಮಾಡಿದರೂ ಅದರ ಸೊಬಗು ಉಳಿಯದು. ಪೊಟರೆ ಹೆಚ್ಚು ಹೊತ್ತು ತೆರೆದಿಡಲ್ಪಟ್ಟರೆ ಒಳಗೆ ಗಾಳಿ ಹೊಕ್ಕು ಆಮ್ಲಜನಕ ಅದರ ಸೊಬಗನ್ನು ಸೂರೆ ಮಾಡಿಬಿಡುತ್ತದೆ.

ಪ್ರಕೃತಿಯ ಒಂದು ವಿಶಿಷ್ಟ ಕೊಡುಗೆಯಾದ ಅಪರೂಪದ ಅಣಬೆಗಳನ್ನು ಕೃತಕ ವಾತಾವರಣದಲ್ಲಿ ಬೆಳೆಸಲು ಸಾಧ್ಯವಿದ್ದಿದ್ದರೆ ಚೆನ್ನಾಗಿರುತ್ತಿತ್ತು!

*ಸಂಗ್ರಹ: ಸುಬ್ರಹ್ಮಣ್ಯ*

ಆಗಸ್ಟ್ 2017 ತಿಂಗಳಲ್ಲಿ ನಮ್ಮ ಮಹಿಳಾ ವಿಶೇಷ ಬಳಗ ಹಾಗೂ ಸ್ನೇಹಿತರುಗಳ ಹುಟ್ಟುಹಬ್ಬದ ಪ್ರಯುಕ್ತ ಮೈಸೂರಿನ ಅಧಿದೇವತೆ ಚಾಮುಂಡೇಶ್ವರಿ ಇವರುಗಳಿಗೆ ಆಯುರಾರೋಗ್ಯ, ಐಶ್ವರ್ಯಗಳನ್ನು ಕರುಣಿಸಲಿ ಎಂದು ಕೋರುತ್ತಾ, ಪತ್ರಿಕಾ ಬಳಗವು ಶುಭವನ್ನು ಕೋರುತ್ತಿದೆ.

| | | | |
|---|---|---|---|
| 1 | ಅಭಿಜ್ಞಾ, ಶೃಂಗೇರಿ | 17 | ಓಂಪ್ರಭಾ, ರಾಯಚೂರು |
| 2 | ಪವಿತ್ರ, ಬಾಂಬೆ | 18 | ತ್ರಿವೇಣಿ, ಬೆಳಗಾವಿ |
| 3 | ಶ್ರೀಗೌರಿ, ಬರೋಡಾ | 19 | ನಯನಾಮಣಿ, ಶಿವಮೊಗ್ಗ |
| 4 | ಬಾಲಾಮಣಿ, ಕನಕಪುರ | 20 | ತುಷಾರ, ಚನ್ನಪಟ್ಟಣ |
| 5 | ಮಾಧುರ್ಯ, ಹೊಸಪೇಟೆ | 21 | ಜ್ಞಾನಲೀಲಾ, ಬೇಲೂರು |
| 6 | ಪ್ರೇಮಲತಾ, ತೀರ್ಥಹಳ್ಳಿ | 22 | ಅಹಲ್ಯ, ಮಂಡ್ಯ |
| 7 | ನೀಲಾಮಣಿ, ಮಾಲೂರು | 23 | ರೂಪಿಣಿ, ಮಡಿಕೇರಿ |
| 8 | ಧರಣೀದೇವಿ, ಬಳ್ಳಾರಿ | 24 | ಕಾವೇರಿ, ಪೊನ್ನಂಪೇಟೆ |
| 9 | ಜಲಜಾಕ್ಷಿ, ಉಡುಪಿ | 25 | ಕುಂಜು, ದುಬೈ |
| 10 | ಚಂದ್ರಮತಿ, ಕಡಪ | 26 | ಭಾಮಿನಿ, ಮಂತ್ರಾಲಯ |
| 11 | ಸುದೀಕ್ಷಾ, ಮೈಸೂರು | 27 | ತೇಜಸ್ವಿನಿ, ಭದ್ರಾವತಿ |
| 12 | ಕೃಷ್ಣಕುಮಾರಿ, ಕೋಲಾರ | 28 | ಜ್ಯೋತಿಕಿರಣ, ಚಾಮರಾಜನಗರ |
| 13 | ಧರ್ಮಸಾಗರಿ, ಧರ್ಮಾವರಂ | 29 | ಚಾರುಹಾಸಿನಿ, ಬೆಂಗಳೂರು |
| 14 | ನಾಗವೇಣಿ, ತುಮಕೂರು | 30 | ಕುಮುದಾ, ಮೈಸೂರು |
| 15 | ಸುನಂದಾ ರಾಮ್, ಬೆಂಗಳೂರು | 31 | ಪ್ರಗತಿ, ಹುಣಸೂರು |
| 16 | ಪೂರ್ಣಿಮಾ, ಹಾಸನ | | |

### ಅಂತರ

ನಿಶ್ಚಿತಾರ್ಥ ಹಾಗೂ ಮದುವೆಯ ನಡುವೆ ಕೆಲವು ದಿನಗಳ ಅಂತರ ಇರಲು ಕಾರಣವೇನು? ಎಂದು ಗುಂಡ ತನ್ನ ಗೆಳೆಯನಿಗೆ ಕೇಳಿದ.

ಏಕೆಂದರೆ ಮುಂದೆ ನಡೆಯುವ ದುರ್ಘಟನೆಯಿಂದ ರಕ್ಷಿಸಿಕೊಳ್ಳಲು ನನಗೆ ಅವಕಾಶವನ್ನೇ ನೀಡಲಿಲ್ಲ ಎಂದು ವರ ಮಹಾಶಯ ಹೇಳಬಾರದಲ್ಲ. ಬಹುಶಃ ಅದಕ್ಕೆ ಇದ್ದಿರಬಹುದು ಎಂದ ಗುಂಡನ ಗೆಳೆಯ.

### ನಗರದ ಹುಡುಗಿ ಹಳ್ಳಿ ಸೊಸೆ

ನಗರದ ಹುಡುಗಿ ಹಳ್ಳಿಗೆ ಸೊಸೆಯಾಗಿ ಬಂದಳು. ಹೊಸದರಲ್ಲಿ ಒಂದು ದಿನ ಅವಳ ಅತ್ತೆ ಅವಳಿಗೆ ಎಮ್ಮೆಗೆ ಹುಲ್ಲು ಹಾಕಿ ಬರಲು ಹೇಳಿದಳು. ಸೊಸೆ ಹುಲ್ಲನ್ನು ತೆಗೆದುಕೊಂಡು ಕೊಟ್ಟಿಗೆಗೆ ಹೋದಾಗ ಎಮ್ಮೆಯ ಬಾಯಲ್ಲಿ ಬೆಳ್ಳನೆಯ ನೊರೆ ಬಂದಿತ್ತು. ಅದನ್ನು ಕಂಡ ಸೊಸೆ ಹುಲ್ಲನ್ನು ಎಮ್ಮೆಗೆ ಹಾಕದೆ ಹಾಗೆಯೇ ತಿರುಗಿ ಬಂದಳು.

'ಎಮ್ಮೆಗೆ ಹುಲ್ಲು ಹಾಕಿದೆಯಾ?' ಎಂದು ಅತ್ತೆ ಕೇಳಿದಾಗ,

'ಇಲ್ಲ ಅತ್ತೆ, ಎಮ್ಮೆ ಬ್ರಷ್ ಮಾಡುತ್ತಿತ್ತು. ಆಮೇಲೆ ಹಾಕುತ್ತೇನೆ' ಎಂದಳು.



## ನಿಮ್ಮ ಆರೋಗ್ಯ ನಿಮ್ಮ ಕೈಯಲ್ಲೇ ಇದೆ

ಕೃಪೆ: ಡಾ. ಕೆ. ರಾಮಚಂದ್ರ, ಮಂಡ್ಯ

## ಸಕ್ಕರೆ ಕಾಯಿಲೆ ಮತ್ತು ಅದರ ವ್ಯಾಪ್ತಿ

**21. ಸ್ವಯಂಚಿಕಿತ್ಸೆ ಮಾಡಿಕೊಂಡು ತೊಂದರೆಗಳಿಗೆ ಈಡಾಗುವುದು.**

ಮಧುಮೇಹಿಗಳು ತಮ್ಮ ಪಾದಗಳನ್ನು ಮುಖದಷ್ಟೆ ಚೆನ್ನಾಗಿ ನೋಡಿಕೊಳ್ಳಬೇಕೆಂಬುದು ಎಲ್ಲಾ ವೈದ್ಯರ ಮಾತು. ಆದರೆ ಇದರ ಬಗ್ಗೆ ಹೆಚ್ಚಿನ ಕಾಳಜಿ ಕಂಡುಬರದಿರುವುದು ಖೇದದ ಸಂಗತಿ. ಒಂದು ಸಣ್ಣ ತರಚು ಗಾಯವಾದರೂ ಅಥವಾ ಸಣ್ಣ ಗಾಯವಾದರೂ ತಕ್ಷಣ ವೈದ್ಯರನ್ನು ಸಂಪರ್ಕಿಸಿ ಸಲಹೆ ಪಡೆಯುವುದು ಒಳ್ಳೆಯದು. ನಾನು ಕಂಡಂತೆ ಹೆಚ್ಚಿನ ರೋಗಿಗಳು ಇದಕ್ಕೆಲ್ಲ ವೈದ್ಯರೇಕೆ ಎಂದು ತಾವೇ ಸ್ವಯಂ ಚಿಕಿತ್ಸೆ ಮಾಡಿಕೊಂಡು ಅದನ್ನು ರಣಗಾಯ ಮಾಡಿಕೊಂಡು, ಕೀವು ಬರಿಸಿಕೊಂಡು ಹಾಗೂ ಕೆಲವೊಮ್ಮೆ ಗ್ಯಾಂಗ್ರೀನ್ ಮಟ್ಟಕ್ಕೆ ಹೋದಾಗ ಬರುತ್ತಾರೆ. ಇದರಿಂದ ಕೆಲವೊಮ್ಮೆ ಬೆರಳುಗಳನ್ನು ಹಾಗೂ ಪಾದಗಳನ್ನು ತೆಗೆಯುವ ಸಂಭವ ಉಂಟಾಗಬಹುದು. ಆದುದರಿಂದ ರೋಗಿಗಳು ತಮಗೆ ಯಾವ ತೊಂದರೆಗಳಾದರೂ ತಕ್ಷಣ ನಿಮ್ಮ ವೈದ್ಯರ ಸಲಹೆ ಪಡೆದು ಅವರೇ ಚಿಕಿತ್ಸೆಯನ್ನು ನಿಲ್ಲಿಸುವ ತನಕ ನೀವು ಅದನ್ನು ಮಾರ್ಪಡಿಸಬೇಡಿ. ಕೆಲವೊಮ್ಮೆ ರೋಗಿಗಳು ಗುಣವಾಗುತ್ತಿದೆ. ಇನ್ನೇತಕ್ಕೆ ಔಷಧಿ ಎಂದು ನಿಲ್ಲಿಸಿ ಮತ್ತೆ ಹೆಚ್ಚು ಅನಾಹುತ ಮಾಡಿಕೊಳ್ಳುತ್ತಾರೆ. ಆದುದರಿಂದ ನಿಮ್ಮ ವೈದ್ಯರ ಜೊತೆ ಮುಕ್ತವಾಗಿ ಚರ್ಚಿಸಿ ನಿರ್ಧಾರ ತೆಗೆದುಕೊಳ್ಳಿ.

**22. ಸ್ವಯಂ ನಿಯಂತ್ರಣ ವ್ಯವಸ್ಥೆ ಬಗ್ಗೆ ಸರಿಯಾದ ಮಾಹಿತಿ ಪಡೆಯದಿರುವುದು**

ಹೆಚ್ಚಿನ ಮಧುಮೇಹಿಗಳಲ್ಲಿ ಸ್ವಯಂ ನಿಯಂತ್ರಣ ವ್ಯವಸ್ಥೆಯ ಬಗ್ಗೆ ಯಾವುದೇ ರೀತಿಯ ತಿಳಿವಳಿಕೆಯಾಗಲಿ ಇರುವುದಿಲ್ಲ. ಪ್ರತಿಯೊಬ್ಬ ರೋಗಿಗೂ ನಮ್ಮ ಡಯಾಬಿಟಿಕ್ ಸೆಂಟರ್‌ನಲ್ಲಿ ಒಂದು ಕೈಪಿಡಿ ನೀಡುತ್ತೇವೆ. ಇದರಲ್ಲಿ ಪ್ರತಿ ಬಾರಿಯೂ ರೋಗಿಯ ರಕ್ತದಲ್ಲಿ ಗ್ಲೂಕೋಸ್ ವಿವರ (ಸಕ್ಕರೆ ಅಂಶ) ರಕ್ತದೊತ್ತಡ ಹಾಗೂ ತೂಕವನ್ನು ಪ್ರತಿಬಾರಿ ಬರೆಯುತ್ತೇವೆ. ಅದೇ ರೀತಿ 3–4 ತಿಂಗಳಿಗೊಮ್ಮೆ ಪಾದಗಳನ್ನು ಪರೀಕ್ಷಿಸಿ ನರಬೇನೆಯನ್ನು ಗುರುತಿಸುತ್ತೇವೆ. ಅದು ಸಹ ರೋಗಿಗೆ ಕನ್ನಡದಲ್ಲೇ ಬರೆದುಕೊಡುತ್ತೇವೆ.

ರೋಗಿಯು ಪ್ರತಿ ತಿಂಗಳು ಬಂದಾಗ ತನ್ನ ಹಿಂದಿನ ಎಲ್ಲಾ ವಿವರಗಳ ಜೊತೆ ಈ ತಿಂಗಳ ವಿವರವನ್ನು ತುಲನೆ ಮಾಡಿ ಎಲ್ಲಿ ತಪ್ಪು ಮಾಡಿದ್ದೇನೆ, ಆಹಾರದಲ್ಲೇ, ವ್ಯಾಯಾಮದಲ್ಲೇ, ಮಾನಸಿಕ ಒತ್ತಡವೇ ಹಾಗೂ ಔಷಧಿಗಳ ಉಪಯೋಗದಲ್ಲೇ ಎಂದು ವಿವೇಚಿಸಿ ಅದನ್ನು ತಿದ್ದಿಕೊಂಡು ಸರಿ ಮಾಡಿಕಂಡು ಉತ್ತಮವಾಗಿ ಸಕ್ಕರೆ ಅಂಶ, ರಕ್ತದೊತ್ತಡ ಹಾಗೂ ತೂಕ ಸರಿ ಮಾಡಿಕೊಂಡಾಗ ದುಷ್ಪರಿಣಾಮಗಳನ್ನು ಬಹಳ ಯಶಸ್ವಿಯಾಗಿ ತಡೆಗಟ್ಟಬಹುದು. ಇದನ್ನೇ ನಾವು ಸ್ವಯಂ ನಿಯಂತ್ರಣ ವ್ಯವಸ್ಥೆ ಎನ್ನುವುದು. ಇಲ್ಲಿ ವೈದ್ಯರ ಪಾತ್ರಕ್ಕಿಂತ ರೋಗಿಯ ಪಾತ್ರವೇ ಹೆಚ್ಚು. ರೋಗಿಗಳು ತಾವು ತಿಳಿದುಕೊಂಡು ಬೇರೆಯವರಿಗೂ ಸರಿಯಾಗಿ ತಿಳಿಸಬೇಕೆಂಬುದೇ ನಮ್ಮ ಆಶಯ. *(ಮುಗಿಯಿತು)*

# ವಿಷನ್ ಮೈಸೂರು 2030

ಮೈಸೂರು 2030ರ ಸುಮಾರಿಗೆ ಹೇಗೆ ಬೆಳೆಯಬೇಕು ಮತ್ತು ಅದಕ್ಕೆ ನಾಗರೀಕರು, ಆಡಳಿತಗಾರರು ಹಾಗೂ ಜನಪ್ರತಿನಿಧಿಗಳು ಹೇಗೆ ಸಜ್ಜಾಗಬೇಕು ಎನ್ನುವ ಉದ್ದೇಶ ಇಟ್ಟುಕೊಂಡು ಮೈಸೂರು ಪರಂಪರೆ ಬಗ್ಗೆ ಕಾಳಜಿಯುಳ್ಳ ಕೆಲವು ನಾಗರೀಕರು ಸೇರಿಕೊಂಡು ದಿನಾಂಕ 12–8–2017 ಹಾಗೂ 13–8–2017 ಎರಡು ದಿನಗಳ ವಿಚಾರ ಸಂಕಿರಣವನ್ನು ನಗರದ ಗಾನಭಾರತಿ ಸಭಾಂಗಣದಲ್ಲಿ ನಡೆಸಲಾಗುವುದೆಂದು ಸಂಚಾಲಕರಾದ ಡಾ. ಕೆ.ಎಸ್. ನಾಗಪತಿರವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ 92417–80380 ಸಂಪರ್ಕಿಸಲು ಕೋರಿದೆ.

## ಕೆಲವು ಭೌಗೋಳಿಕ ಪದಗಳು

| | |
|---|---|
| ಖಂಡ | ಸಮುದ್ರ ಮಟ್ಟಕ್ಕಿಂತ ಎತ್ತರದಲ್ಲಿರುವ ವಿಶಾಲ ಭೂ ಭಾಗ. |
| ಬೆಟ್ಟ | ನೆಲದ ಮಟ್ಟಕ್ಕಿಂತ ಅತಿ ಎತ್ತರವಾದ ಭೂಭಾಗ. |
| ಪರ್ವತ | ಬಹು ಎತ್ತರವಾದ ಬೆಟ್ಟಗಳ ಪ್ರದೇಶ |
| ಪರ್ವತಸ್ತೋಮ | ಅನೇಕ ಬೆಟ್ಟ ಗುಡ್ಡಗಳಿಂದ ಕೂಡಿದ ದೊಡ್ಡದಾದ ಬೆಟ್ಟಗಳ ಸಾಲು. |
| ಪ್ರಸ್ಥಭೂಮಿ | ಸಮುದ್ರದ ಮಟ್ಟಕ್ಕೆ ಸಾವಿರ ಅಡಿಗಿಂತ ಎತ್ತರವಿರುವ ಪ್ರದೇಶ |
| ಕಣಿವೆ | ಎರಡು ಬೆಟ್ಟಗಳ ನಡುವಿನ ಕಿರಿದಾದ ಓಣಿಯಂಥ ಪ್ರದೇಶ |
| ಶಿಖರಗಳು | ಪರ್ವತಗಳ ತುಟ್ಟತುದಿಯ ಪ್ರದೇಶ |
| ಅಗ್ನಿಪರ್ವತ | ಭೂಮಿಯ ಒಳಭಾಗದಿಂದ ಹೊರಚಲ್ಲಲ್ಪಡುವ ಲಾವ, ಅನಿಲಗಳು ಹರಿದು ಬರುವ ಬೆಟ್ಟದಂಥ ಸ್ಥಳ. |
| ನದಿ | ಬೆಟ್ಟ, ಪರ್ವತ ಸರೋವರಗಳ ಉಗವು ಸ್ಥಾನದಿಂದ ಸಮುದ್ರದವರೆಗೆ ಹಾಗೂ ನದಿಗಳ ಕೂಡುವಿಕೆವರೆಗೂ ಹರಿಯುವ ಸ್ವಾಭಾವಿಕ ನೀರು. |
| ಉಪನದಿಗಳು | ಒಂದು ದೊಡ್ಡ ನದಿಗೆ ಕೂಡುವ ಇತರ ಸಣ್ಣ ನದಿಗಳು. |
| ಸರೋವರ | ನೀರಿನಿಂದ ತುಂಬಿದ ದೊಡ್ಡ ವಿಸ್ತೀರ್ಣದ ಪ್ರದೇಶ |
| ಚಿಲುಮೆ | ಸ್ವಾಭಾವಿಕವಾಗಿ ನೀರು ಮೇಲಕ್ಕೆ ಚಿಮ್ಮುವ ಸ್ಥಳ |
| ಜಲಪಾತ | ಹರಿಯುವ ನೀರು ಇದ್ದಕ್ಕಿದ್ದಂತೆ ಅತ್ಯಂತ ಕೆಳಮಟ್ಟಕ್ಕೆ ಧುಮುಕುವ ಆಳಕ್ಕೆ ಬೀಳುವ ರಮ್ಯ ಸ್ಥಳ |
| ಸಾಗರಗಳು | ಉಪ್ಪು ನೀರಿನಿಂದ ಕೂಡಿದ, ಆಳವಾದ, ವಿಸ್ತಾರವಾದ ನೀರಿನ ಹರವು. |
| ಸಮುದ್ರ | ಉಪ್ಪುನೀರಿನಿಂದ ಕೂಡಿದ, ಸಾಗರಕ್ಕಿಂತ ಕಿರಿದಾದ ನೀರಿನ ವಿಸ್ತರಣೆ. |
| ಸಾಗರೀಕ ಪ್ರವಾಹ | ಸಾಗರದ ಮೇಲ್ಮೈನ ನೀರು ಒಂದು ಭಾಗದಿಂದ ಮತ್ತೊಂದು ಭಾಗಕ್ಕೆ ಹರಿಯುವ ನೀರಿನ ಓಟ. |

–ವಿಜಯಕುಮಾರಿ, ಮಂಗಳೂರು



# ಎಲ್ಲಾ ಪುರುಷರಲ್ಲಿ ಕಾಣಸಿಗದ ಗುಣಗಳಿವು!

ಪ್ರತಿಯೊಂದು ಹೆಣ್ಣಿಗೆ ತನ್ನ ಬಾಳ ಸಂಗಾತಿಯ ಬಗ್ಗೆ ತುಂಬಾ ಕನಸುಗಳಿರುತ್ತವೆ. ಹುಡುಗ ನೋಡಲು ಸುಂದರವಾಗಿರಬೇಕು, ಒಳ್ಳೆಯ ಕೆಲಸದಲ್ಲಿರಬೇಕು, ನನ್ನನ್ನು ತುಂಬಾ ಪ್ರೀತಿಸಬೇಕು ಎಂದು ಬಯಸುತ್ತಾರೆ.

ಅಂತಹ ಹುಡುಗರು ಸಿಗಬಹುದು. ಆದರೆ ಇವೆಲ್ಲಕ್ಕಿಂತ ಹುಡುಗರ ಕೆಲವೊಂದು ಗುಣಗಳು ಹುಡುಗಿಯರನ್ನು ತುಂಬಾ ಆಕರ್ಷಿಸುತ್ತವೆ. ಆದರೆ ಈ ಗುಣಗಳು ಎಲ್ಲಾ ಪುರುಷರಲ್ಲಿ ಕಂಡುಬರುವುದಿಲ್ಲ. ಈ ಕೆಳಗಿನ ಗುಣವಿರುವ ಹುಡುಗರು ತಮ್ಮ ಪ್ರೀತಿ ವ್ಯಕ್ತಪಡಿಸಿದರೆ ಹುಡುಗಿಯರು ಯಾವುದೇ ಕಾರಣಕ್ಕೂ ನಿರಾಕರಿಸುವುದಿಲ್ಲ. ಅಂತಹ ವಿಶಿಷ್ಟ ಗುಣಗಳು ಯಾವುವು ಎಂದರೆ ಈ ಕೆಳಕಂಡಂತಿವೆ.

**1. ಅಡುಗೆ ಮಾಡಲು ಗೊತ್ತಿರಬೇಕು:** ಕೆಲವು ಹುಡುಗರು ಅಡುಗೆ ಮನೆ ಮತ್ತು ನಮಗೆ ಸಂಬಂಧವೇ ಇಲ್ಲ ಎಂದು ಭಾವಿಸುತ್ತಾರೆ. ಆದರೆ ಕೆಲವು ಪುರುಷರು ಮಹಿಳೆಯರು ಮಾಡುವುದಕ್ಕಿಂತ ರುಚಿಕರವಾದ ಅಡುಗೆಯನ್ನು ತಯಾರಿಸುತ್ತಾರೆ. ಯಾವತ್ತೂ ಅವಳೇ ಅಡುಗೆ ಮಾಡಿ ಬಡಿಸುವಾಗ ಅಪರೂಪಕ್ಕೆ ನೀವು ಅಡುಗೆ ಮಾಡಿ ಬಡಿಸಿ ನೋಡಿ, ಅವಳಿಗೆ ತುಂಬಾ ಖುಷಿಯಾಗುತ್ತದೆ.

ಒಂದು ದಿನ ಹುಷಾರು ತಪ್ಪಿದರೂ ಇವನು ಅಡುಗೆ ಮಾಡಿ ಹಾಕುತ್ತಾನೆ ಎನ್ನುವ ಭರವಸೆ ಅವಳಿಗೆ ಬರುತ್ತದೆ. ಒಂದು ವೇಳೆ ನಿಮ್ಮ ಹೆಂಡತಿಗೆ ಹುಷಾರು ತಪ್ಪಿದಾಗ ಹೊರಗಿನಿಂದ ಆಹಾರ ತಂದು ತಿನ್ನದೆ ನೀವೇ ಅಡುಗೆ ಮಾಡಿ, ಅವಳಿಗೆ ಕೊಡಿ. ಆಗ ಅವಳ ಮುಖದಲ್ಲಿ ಕಾಣುವ ಸಂತೋಷ ಎಷ್ಟೇ ದೊಡ್ಡ ರೆಸ್ಟೋರೆಂಟ್‌ಗೆ ಕರೆದುಕೊಂಡು ಹೋದರೂ ಕಾಣಲು ಸಾಧ್ಯವಿಲ್ಲ.

**2. ತಾಯಿಯನ್ನು ನೋಡಿಕೊಳ್ಳುವ ಹುಡುಗ:** ತಾಯಿಯ ಮಾತಿಗೆ ಗೌರವ ಕೊಡುವವನು, ತಾಯಿಯನ್ನು ಚೆನ್ನಾಗಿ ನೋಡಿಕೊಳ್ಳುವವನು ಹುಡುಗಿಯರಿಗೆ ತುಂಬಾ ಇಷ. ಏಕೆಂದರೆ ತಾಯಿಯನ್ನು ಚೆನ್ನಾಗಿ ನೋಡಿಕೊಳ್ಳುವವನು ನನ್ನನ್ನು ಮುಂದೆ ಚೆನ್ನಾಗಿ ನೋಡಿಕೊಳ್ಳಬಲ್ಲ ಎಂಬ ಭಾವನೆ ಹೆಣ್ಣುಮಕ್ಕಳಲ್ಲಿ ಇರುತ್ತದೆ.

**3. ಪ್ರಾರ್ಥನೆ ಮಾಡುವವರು:** ತುಂಬಾ ಭಕ್ತಿಯಿಂದ ದೇವರ ಆರಾಧನೆ ಮಾಡುವ ಪುರುಷರು ಹುಡುಗಿಯರಿಗೆ ಇಷ್ಟವಾಗುತ್ತಾರೆ. ಏಕೆಂದರೆ ಭಕ್ತಿ ಇರುವ ಮನಸ್ಸಿನಲ್ಲಿ ಕಲ್ಮಶ ಇರಲು ಸಾಧ್ಯವಿಲ್ಲ ಎಂದು ಹುಡುಗಿಯರು ಅಂತಹ ಹುಡುಗರನ್ನು ತುಂಬಾ ಇಷ್ಟಪಡುತ್ತಾರೆ.

**4. ನಮ್ಮ ಮಾತನ್ನು ಕೇಳುವವರು:** ತಾವು ಮಾತನಾಡುತ್ತಿದ್ದರೆ ಅದನ್ನು ಕೇಳಿಸಿಕೊಳ್ಳುವ ತಾಳ್ಮೆ ತೋರಿಸುವ ಪುರುಷ ಮಹಿಳೆಯರಿಗೆ ತುಂಬಾ ಇಷ್ಟವಾಗುವುದು.

**5. ಅಳುವ ಹುಡುಗರು:** ಅಳುವುದು ಪುರುಷರ ಲಕ್ಷಣವಲ್ಲ ಎಂದು ಭಾವಿಸಿ ಅನೇಕ ಪುರುಷರು ಅಳಲು ಹಿಂಜರಿಯುತ್ತಾರೆ. ಆದರೆ ದುಃಖ ಆದಾಗ ಅಳುವ

ಹುಡುಗರನ್ನು ಮಹಿಳೆಯರು ತುಂಬಾ ಒಳ್ಳೆಯವನೆಂದು ಬೇಗನೆ ನಂಬಿಬಿಡುತ್ತಾರೆ.

**6. ಪಿಂಕ್ ಬಣ್ಣದ ಬಟ್ಟೆ:** ಹೆಣ್ಣುಮಕ್ಕಳು ಪಿಂಕ್ ಬಣ್ಣ ತುಂಬಾ ಇಷ್ಟಪಡುತ್ತಾರೆ. ಪುರುಷರು ಪಿಂಕ್ ಬಣ್ಣದ ಷರ್ಟ್ ಧರಿಸಿದರೆ ಮಹಿಳೆಯರಿಗೆ ಇಷ್ಟವಾಗುತ್ತಾರೆ. ಪಿಂಕ್ ಬಣ್ಣ ಎಲ್ಲಾ ಪುರುಷರಿಗೆ ಚೆಂದ ಕಾಣುವುದಿಲ್ಲ. ಆದರೆ ತೆಳು ಪಿಂಕ್ ಬಣ್ಣದ ಷರ್ಟ್ ಎಣ್ಣೆಗೆಂಪು ಬಣ್ಣದ ಹುಡುಗರಿಗೆ ಆಕರ್ಷಕವಾಗಿಕಾಣುವುದು.

**7. ಮಕ್ಕಳನ್ನು ಇಷ್ಟಪಡುವವರು:** ಮಕ್ಕಳನ್ನು ಇಷ್ಟಪಡುವ ಮತ್ತು ಮಕ್ಕಳ ಜೊತೆ ಚೆನ್ನಾಗಿ ಬೆರೆಯುವ ಹುಡುಗರೆಂದರೆ ಹುಡುಗಿಯರಿಗೆ ತುಂಬಾ ಇಷ್ಟವಾಗುವುದು.

**8. ಹಾಸ್ಯ ಗುಣವಿರುವವರು:** ಕೆಲವರ ಜೊತೆ ಮಾತನಾಡಿದರೆ ಅವರು ಮಾಡುವ ಹಾಸ್ಯಕ್ಕೆ ನಮ್ಮಲ್ಲಿರುವ ಚಿಂತೆಗಳು ಮಾಯವಾಗುತ್ತವೆ. ಈ ರೀತಿ ಹಾಸ್ಯ ಪ್ರವೃತ್ತಿ ಇರುವ ಹುಡುಗರೆಂದರೆ ಹುಡುಗಿಯರಿಗೆ ತುಂಬಾ ಇಷ್ಟವಾಗುವುದು.

ಇದಲ್ಲದೆ ವಿಶಾಲ ಮನೋಭಾವ, ಬೇರೆಯವರ ಭಾವನೆಗಳನ್ನು ಗೌರವಿಸುವುದು, ಆಂತರಿಕ ಸೌಂದರ್ಯಕ್ಕೆ ಹೆಚ್ಚು ಬೆಲೆ ಕೊಡುವ ಹುಡುಗರು ಹುಡುಗಿಯರಿಗೆ ತುಂಬಾ ಇಷ್ಟವಾಗುತ್ತಾರೆ.

ಸಂಜನ: ನೀವು ತಂದ ಹೊಸ ಕಾರ್ ಹೆಸರೇನು?

ಅಂಜಲಿ: ನನಗೆ ಗೊತ್ತಿಲ್ಲ ಕಣ್ರೀ. ಆದರೆ 'T' ಯಿಂದ ಸ್ಟಾರ್ಟ್ ಆಗುತ್ತೆ.

ಸಂಜನ: ನೀವೇ ಲಕ್ಕಿ ಕಣ್ರೀ ಅಂಜಲಿ! ನಮ್ಮ ಕಾರು ಪೆಟ್ರೋಲ್‌ನಿಂದ ಮಾತ್ರ ಸ್ಟಾರ್ಟ್ ಆಗೋದು.

★★★

ಗುರುಗಳು: ಮಕ್ಕಳೇ ದಯವಿಟ್ಟು ಪಾಠವನ್ನು ಲಕ್ಷ್ಯವಿಟ್ಟು ಕೇಳಿ.

ಸುನೀಲ್: ಸರ್ ನಾನು ಹೊರಗೆ ಹೋಗುತ್ತೇನೆ.

ಗುರುಗಳು: ಯಾಕೋ ಸುನೀಲ್?

ಸುನೀಲ್: ಸಾರ್ ನಾವು ಬಡವರು ಲಕ್ಷ ಇಟ್ಟು ಪಾಠ ಕೇಳೋಕ್ಕೆ ನನ್ನಲ್ಲಿ ಹಣವಿಲ್ಲ.

(ಸಂಗ್ರಹ: ಸಾವಿತ್ರಿ)

**ಅವಕಾಶ ನೀಡಲ್ಲ**

ಆಕೆ: ಏನೇ, ನೀನು ಮೆಚ್ಚಿದ ಹುಡುಗ ಚೆನ್ನಾಗಿದ್ದಾನೆ. ಆದ್ರೆ ಮಾತಾಡಿದ್ರೆ ಬಾಯಿಯಿಂದ ದುರ್ವಾಸನೆ ಬರುತ್ತಲ್ಲೆ.

ಈಕೆ: ನಾನು ಮದುವೆಯಾದ್ಮೇಲೆ ಮಾತಾಡಕ್ಕೆ ಅವಕಾಶ ನೀಡಲ್ಲ ಬಿಡು.

**ನನ್ನ ಪ್ರಪಂಚ**

ಪತ್ನಿ: ನಾನು ನಿಮಗಾಗಿ ಸಂಪೂರ್ಣ ಜಗತ್ತಿನ ಜೊತೆ ಜಗಳವಾಡಬಲ್ಲೆ.





RNI No. KARKAN/2015/71642
KA/SK/MYS/1091/2017-2019

**ಗೌರಿ-ಗಣೇಶ ಹಬ್ಬದ ಪ್ರಯುಕ್ತ ಶುಭಾಶಯಗಳು**

**B-Soft Infotech**

No. 2352, 4th Cross, 6th Main
Vinayakanagara, Mysore 570 012
Contact No. 0821-4195190

**GST Software Available**

Contact: 88677-74447, 92435-84444



**ಗೌರಿ-ಗಣೇಶ ಹಬ್ಬದ ಪ್ರಯುಕ್ತ ಶುಭಾಶಯಗಳು**

**ಕರ್ನಾಟಕ ಪ್ರೆಸ್ ಕೌನ್ಸಿಲ್ (ರಿ.)**

**ಸಂ. 1149, 'ಪ್ರಗತಿ', ರೈಲ್ವೆ ಸ್ಟೇಷನ್ ರಸ್ತೆ,**

**ಚಾಮರಾಜಪುರಂ, ಮೈಸೂರು**

**ಮೊ. 88803-34444**

Edited, Published and Owned by **H.V. Venkatasubbarao**, No. 1021, 14th Cross, 2nd Stage, Hebbal, Mysore-570 017 and Printed by B.C. Meera and Printed at Annapoorna Offset Printer, No. 511, 14th Main, Saraswathipuram, Mysore 570 009. Published at No. 1021, 14th Cross, 2nd Stage, Hebbal, Mysore-570 017. E-mail: mahilavishesha@yahoo.com Web: www.mahilavishesha.in Editor: **H.V. Venkatasubbarao** Mob.: 88803-34444, RNI No. KARKAN/2015/71642

ತೆರೆದ ಅಂಚೆ

To